17 December 2025 Wednesday SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಕಷ್ಟಗಳೇ ಕರ್ಮ ಬಾಧೆಗಳಾಗಿ
ಮಾರ್ಪಾಡಾಗುತ್ತವೆ!
ಹೀಗಾಗಿ ಪಾಪ ಕರ್ಮಗಳ
ಕಳೆಯಲು ಬರುವದೇ ಕಷ್ಟಗಳು!
ಸ್ನೇಹಾ ಆನಂದ್

**ಒಂದೊಳ್ಳೆ ಮಾತು**

ಮೌನ ಮತ್ತು ನಗು ಇವು
ಯಶಸ್ವಿ ಜನರ
ಲಕ್ಷಣ ನಗುವಿನಿಂದ ಸಮಸ್ಯೆ
ಬಗೆ ಹರಿಯುತ್ತದೆ
ಮೌನದಿಂದ ಸಮಸ್ಯೆ
ಬರುವುದು ತಪ್ಪುತ್ತದೆ.
ಮೈಲಾರ ಸಾವಿತ್ರಿಬಾಯಿ

info.varthaman@gmail.com

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 54 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

### ನಮ್ಮ ಹೈಕಮಾಂಡ್ ಹೇಳುವವರೆಗೂ ನಾನೇ ಸಿಎಂ | ಸಿದ್ದರಾಮಯ್ಯ ತಿರುಗೇಟು

# ಮುಂದಿನ ಮುಖ್ಯಮಂತ್ರಿ ಯಾರು?

### ಬೆಳಗಾವಿ ಅಧಿವೇಶನದಲ್ಲಿ ಸ್ವಾರಸ್ಯಕರ ಚರ್ಚೆ | ಸಿದ್ದು ಕಾಲೆಳೆದ ವಿಪಕ್ಷ ನಾಯಕರು

**ಬೆಳಗಾವಿ:** ಕಾಂಗ್ರೆಸ್ ಹೈಕಮಾಂಡ್ ಹೇಳೋವರೆಗೂ ನಾನೇ ಮುಖ್ಯಮಂತ್ರಿ ಆಗಿರುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸದನದಲ್ಲಿ ಬಿಜೆಪಿ ನಾಯಕರ ಲೇವಡಿಗೆ ತಿರುಗೇಟು ನೀಡಿದ್ದಾರೆ.

ರಾಜ್ಯದಲ್ಲಿ ಚರ್ಚೆ ಆಗುತ್ತಿರುವ ಸಿಎಂ ಬದಲಾವಣೆ ಮತ್ತು ಸಿದ್ದರಾಮಯ್ಯ ಐದು ವರ್ಷ ಅಧಿಕಾರ ಪೂರೈಸುವ ಬಗ್ಗೆ ಸದನದಲ್ಲಿ ಮಂಗಳವಾರ ಸ್ವಾರಸ್ಯಕರ ಚರ್ಚೆ ನಡೆಯಿತು. ಈ ಸಂದರ್ಭದಲ್ಲಿ ವಿಪಕ್ಷ ಮತ್ತು ಆಡಳಿತ ಪಕ್ಷದ ನಾಯಕರ ನಡುವೆ ಏಟು-ಎದಿರೇಟಿನ ವ್ಯಂಗ್ಯದ ಮಾತುಗಳು ಪರಸ್ಪರ ರವಾನೆ ಆದವು.



ನೀವೇ ಐದು ವರ್ಷ ಸಿಎಂ ಆಗಿರ್ತೀರಾ ಸರ್ ಎಂಬ ವಿಪಕ್ಷ ನಾಯಕ ಆರ್. ಅಶೋಕ್ ಪ್ರಶ್ನೆಗೆ, ನಮ್ಮ ಹೈಕಮಾಂಡ್ ಹೇಳುವವ... ಪುಟ 2ಕ್ಕೆ



**ಅಧ್ಯಕ್ಷ ಸ್ಥಾನಕ್ಕೆ ಏಕೆ ಕಚ್ಚಾಟ?**

ಸಿಎಂ ಸಿದ್ದರಾಮಯ್ಯ ಮಾತನಾಡಿ, ನಿಮ್ಮಲ್ಲಿ (ಬಿಜೆಪಿ) ಅಧ್ಯಕ್ಷ ಸ್ಥಾನಕ್ಕೆ ಯಾಕೆ ಕಚ್ಚಾಟ? ನಾವು ಹೈಕಮಾಂಡ್ ಹೇಳಿದ ಹಾಗೆ ಕೇಳ್ತೀವಿ. ಜನ ಆಶೀರ್ವಾದ ಮಾಡಿದ್ದಾರೆ ನಮಗೆ. ಜನ ಖುಷಿ ಆಗಿರುವುದು ನಿಮಗೆ ಅಸೂಯೆ, ಹೊಟ್ಟೆ ಕಿಚ್ಚು. ನಾವು ಐದು ವರ್ಷ ತುಂಬಿಸ್ತೇವೆ, ಮುಂದೆಯೂ ನಾವೇ ಗೆದ್ದು ಪುಟ 4ಕ್ಕೆ



**ಆಡಳಿತ- ವಿಪಕ್ಷಗಳ ನಡುವೆ ಸದನದಲ್ಲಿ ಟಕ್ಕರ್, ಪ್ರತಿ ಟಕ್ಕರ್**

ಸದನದಲ್ಲಿ ಸಿಎಂ ಸ್ಥಾನದ ಅವಧಿಯ ಬಗ್ಗೆ ಚರ್ಚೆ ನಡೆಯುತ್ತಿದ್ದ ಸಂದರ್ಭದಲ್ಲಿ ಬಸವನಗೌಡ ಪಾಟೀಲ್ ಯತ್ನಾಳ್ ಮಾತನಾಡಿ, ಐದು ವರ್ಷ ಸಿಎಂ ಯಾರು ಅನ್ನೋದಷ್ಟೇ ಈಗಿರುವ ಪ್ರಶ್ನೆ. ಸಿದ್ದರಾಮಯ್ಯ ಇರ್ತಾರೋ ಅಥವಾ ಬೇರೆಯವರು ಬರ್ತಾರೋ ಎಂದು ಪ್ರಶ್ನಿಸಿದರು.

ಸುರೇಶ್ ಕುಮಾರ್ ಮಾತನಾಡಿ, ಇಷ್ಟು ದಿನ ಸಿದ್ದರಾಮಯ್ಯ ಸಿಎಂ ಆಗಿ ನಾನೇ ಮುಂದುವರಿಯುತ್ತೇನೆ ಅಂತಿದ್ದರು. ಈಗ ಏಕವಚನದಿಂದ ಬಹುವಚನಕ್ಕೆ ಬಂದಿದ್ದಾರೆ. ನಾನು ಅನ್ನೋ ಕಡೆ ನಾವು ಅಂತಿದ್ದಾರೆ. ಪ್ರಾಯಶಹಃ ಕನಕದಾಸರು ಹೇಳಿದ್ದ ನಾನು ಹೋದಲ್ಲಿ ಮಾತ್ರ ಹೋಗುತ್ತೇನೆ ಅನ್ನೋದನ್ನು ಅನುಷ್ಠಾನಕ್ಕೆ ತಂದಿದ್ದಾರೆ ಎಂದು ಕಾಲೆಳೆದರು.

ಸಿಎಂ ಪ್ರತಿಕ್ರಿಯಿಸಿ, ನಾನು ಹೋದರೆ ಹೋದೇನು. ಇದು ಕನಕದಾಸರು ಹೇಳಿರೋದು. ಕನಕದಾಸರಿಗೂ ನನಗೂ ಪುಟ 2ಕ್ಕೆ

**ನೀವೇ ಐದು ವರ್ಷ ಸಿಎಂ ಆಗೀರ್ತೀರಾ?**

**ಬೆಳಗಾವಿ:** ನೀವೇ ಐದು ವರ್ಷ ಸಿಎಂ ಆಗೀರ್ತೀರಾ ಸರ್ ಅಂತ ಸಿದ್ದರಾಮಯ್ಯ ಅವರಿಗೆ ಅಶೋಕ್ ಪ್ರಶ್ನಿಸಿದರು. ಅದನ್ನ ನೀನ್ಯಾಕೆ ಕೇಳ್ತೀಯಾ? ಐದು ವರ್ಷ ಇರಿ ಅಂತ ಜನ ಆಶೀರ್ವಾದ ಮಾಡಿದ್ದಾರೆ. ನಾವೇ ಐದು ವರ್ಷ ಇರ್ತೇವೆ ಅಂತ ಸಿಎಂ ಹೇಳಿದರು. ನಾವು ಎದುರು ಮನೆಯವರು ಸರ್, ಕೇಳ್ತೀವಿ, ನೀವು ಐದು ವರ್ಷ ಇರೋದು ಗ್ಯಾರಂಟಿನಾ ಸರ್ ಎಂದು ಅಶೋಕ್ ಮತ್ತೆ ಪ್ರಶ್ನಿಸಿದರು.



ಈ ವೇಳೆ ಮಧ್ಯಪ್ರವೇಶಿಸಿದ ಪರಮೇಶ್ವರ್, ಜನ ಐದು ವರ್ಷ ಆಡಳಿತ ಮಾಡಿ ಅಂತ ಆಶೀರ್ವಾದ ಮಾಡಿದ್ದಾರೆ. ಐದು ವರ್ಷ ನಾವು ಇರ್ತೀವಿ ಅಂದಮೇಲೆ ನಿಮಗೇಕೆ ಅನುಮಾನ ಎಂದು ಹೇಳಿದರು. ನಾನು ನೋಡಿದ ಹಾಗೆ ಅವರು ಪುಟ 2ಕ್ಕೆ

## ರಾಜ್ಯದಲ್ಲಿ ನಿಲ್ಲದ ಹೆಣ್ಣು ಭ್ರೂಣ ಹತ್ಯೆ

### ತಡೆಗೆ ಕಟ್ಟುನಿಟ್ಟಿನ ಕ್ರಮ | ಸಚಿವ ದಿನೇಶ್ ಗುಂಡೂರಾವ್




**ಬೆಳಗಾವಿ:** ರಾಜ್ಯದಲ್ಲಿ ಹೆಣ್ಣು ಭ್ರೂಣ ಹತ್ಯೆ ನಿಂತಿಲ್ಲ ಎಂಬುದನ್ನು ಒಪ್ಪಿಕೊಂಡಿರುವ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಇದನ್ನು ತಡೆಯಲು ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುತ್ತಿದೆ ಎಂದು ತಿಳಿಸಿದರು.

ವಿಧಾನಪರಿಷತ್ತಿನಲ್ಲಿ ಮಂಗಳವಾರ ಮಾತನಾಡಿದ ಅವರು, ಹೆಣ್ಣು ಭ್ರೂಣ ಹತ್ಯೆ ಸಾಮಾಜಿಕ ಅನಿಷ್ಟ. ಇದನ್ನು ತಡೆಗಟ್ಟಲು ಸರ್ಕಾರ ಕಠಿಣ ಕ್ರಮ ಕೈಗೊಳ್ಳುತ್ತಿದೆ. ಸರ್ಕಾರ ಎಲ್ಲ ಜಿಲ್ಲೆಗಳಲ್ಲಿ ಪ್ರತ್ಯೇಕ ನೋಡಲ್ ಅಧಿಕಾರಿಗಳನ್ನು ನೇಮಿಸುತ್ತಿದೆ ಎಂದು ಅವರು ಭರವಸೆ ನೀಡಿದರು.



ಬಿಜೆಪಿ ಸದಸ್ಯ ಸಿ.ಟಿ.ರವಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಹೆಣ್ಣು ಭ್ರೂಣ ಹತ್ಯೆ ಖಂಡಿತ ನಿಂತಿಲ್ಲ. ನೀವು ಲಿಂಗ ಅನುಪಾತವನ್ನು ನೋಡಿದರೆ ಬಹಳಷ್ಟು ವ್ಯತ್ಯಾಸವಿದೆ. ಇದು ನಡೆಯುತ್ತಿದೆ ಎಂದು ನಾನು ಒಪ್ಪಿಕೊಳ್ಳುತ್ತೇನೆ ಎಂದು ಹೇಳಿದರು.

ಭ್ರೂಣ ಹತ್ಯೆಗಳು ಒತ್ತಡದಲ್ಲಿ ನಡೆಯುತ್ತಿಲ್ಲ. ಹೆಣ್ಣು ಮಗು ಬೇಡ ಎಂಬ ಕಾರಣಕ್ಕೆ ಸ್ವಯಂ ಪ್ರೇರಣೆಯಿಂದ ನಡೆಯುತ್ತಿದೆ. ಕೆಲವು ಆಸ್ಪತ್ರೆಗಳಲ್ಲಿ ಲಿಂಗ ಪತ್ತೆ ಆಧಾರದ ಮೇಲೆ ಇಂತಹ ಘಟನೆಗಳು ನಡೆಯುತ್ತಿವೆ. ಇದು ಕಾನೂನುಬಾಹಿರ. ತಂತ್ರಜ್ಞಾನದ ಪ್ರಗತಿಯೊಂದಿಗೆ ಪೋರ್ಟಬಲ್ ಅಲ್ಟ್ರಾಸೌಂಡ್ ಯಂತ್ರಗಳನ್ನು ಅಭಿವೃದ್ಧಿಪಡಿಸಲಾಗಿದೆ. ಇದನ್ನು ಎಲ್ಲಿ ಬೇಕಾದರೂ ಸುಲಭವಾಗಿ ಸಾಗಿಸಬಹುದು ಪರಿಶೀಲಿಸಬಹುದು. ಇದಕ್ಕೆ ಕಡಿವಾಣ ಹಾಕಬೇಕಾದ ಅಗತ್ಯವಿದೆ. ಇದನ್ನು ಕೇಂದ್ರ ಸರ್ಕಾರದ ಗಮನಕ್ಕೆ ತರುತ್ತೇವೆ ಎಂದು ಹೇಳಿದರು. ಪುಟ 2ಕ್ಕೆ



## ಹಣವನ್ನು ಕಮೋಡ್‌ಗೆ ಸುರಿದ ಅಧಿಕಾರಿ!

**ಲೋಕಾಯುಕ್ತ ದಾಳಿ: ಸಿಕಿಬಿದ್ದ ಕೃಷಿ ಇಲಾಖೆ ಜೆಡಿ ರಾಜಶೇಖರ್**




**ಬೆಂಗಳೂರು:** ಲೋಕಾಯುಕ್ತ ಅಧಿಕಾರಿಗಳು ಮಂಗಳವಾರ ಬೆಳ್ಳಂಬೆಳಗ್ಗೆಯೇ ಹಲವು ಭ್ರಷ್ಟ ಅಧಿಕಾರಿಗಳಿಗೆ ಶಾಕ್ ನೀಡಿದ್ದಾರೆ. ಶಿವಮೊಗ್ಗ, ಧಾರವಾಡ ಹಾಗೂ ವಿಜಯನಗರ ಸೇರಿದಂತೆ ರಾಜ್ಯದ ಹಲವು ಕಡೆ ಅಧಿಕಾರಿಗಳಿಗೆ ಸೇರಿದ ಮನೆ, ಕಚೇರಿ ಮೇಲೆ ದಾಳಿ ನಡೆಸಿ ಮಹತ್ವದ ದಾಖಲೆಗಳನ್ನು ವಶಕ್ಕೆ ಪಡೆದಿದ್ದಾರೆ.

ಬೆಳಗಾವಿ ಕೃಷಿ ಇಲಾಖೆ ಜಂಟಿ ನಿರ್ದೇಶಕ ರಾಜಶೇಖರ್ ಅವರ ಧಾರವಾಡದ ಸಿಲ್ವರ್ ಆರ್ಚೆಡ್ ಬಡಾವಣೆಯ ನಿವಾಸದ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದರು. ರಾಜಶೇಖರ್ ಅವರಿಗೆಗೆ ಸೇರಿದ ಒಟ್ಟು ಮೂರು ಕಡೆ ದಾಳಿ ನಡೆದಿದೆ. ರಾಣಿ ಚೆನ್ನಮ್ಮ ನಗರದಲ್ಲಿರುವ ರಾಜಶೇಖರ್ ಗೆ ಸೇರಿದ ಖಾಸಗಿ ಕಚೇರಿ, ಯರಿಕೊಪ್ಪ ಗ್ರಾಮದ ಬಳಿಯ ಫಾರ್ಮ್ ಹೌಸ್ ಮೇಲೂ ದಾಳಿ ನಡೆಸಲಾಗಿದೆ.

ಲೋಕಾಯುಕ್ತ ಸಿಬ್ಬಂದಿ ಕಂಡು ಬೆದರಿದ ರಾಜಶೇಖರ್ ಅವರು ಸುಮಾರು 50 ಸಾವಿರ ರೂ. ಹಣವನ್ನು ಕಮೋಡ್‌ಗೆ ಸುರಿದು ಫ್ಲಶ್ ಮಾಡಿದ್ದಾರೆ. ಸುಮಾರು ಅರ್ಧಗಂಟೆ ಕಾಲ ಲೊಕಾಯುಕ್ತ ಪೊಲೀಸರನ್ನು ಮನೆ ಹೊರಗೆ ಕಾಯಿಸಿ ಬಳಿಕ ಬಾಗಿಲು ತೆರೆದಿದ್ದಾರೆ ಎನ್ನಲಾಗಿದೆ.

ಅಕ್ರಮ ಆಸ್ತಿಗಳಿಕೆ ಆರೋಪದ ಹಿನ್ನೆಲೆಯಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯಪಾಲಕ ಇಂಜಿನಿಯರ್ ರೂಪ್ಲಾ ನಾಯ್ಕ್ ಅವರ ಮನೆ ಮೇಲೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ್ದಾರೆ. ಶಿವಮೊಗ್ಗ ಬಸವನಗುಡಿ ಪ್ರದೇಶದಲ್ಲಿರುವ ರೂಪ್ಲಾ ನಾಯ್ಕ್ ಪುಟ 2ಕ್ಕೆ


## ಸ್ಥಳೀಯ ಸಂಸ್ಥೆಗಳಿಗೆ ಶೀಘ್ರ ಚುನಾವಣೆ

### ಸಚಿವ ರಹೀಂ ಖಾನ್ ಭರವಸೆ | ಬಿಜೆಪಿ-ಕಾಂಗ್ರೆಸ್ ನಡುವೆ ಮಾತಿನ ಚಕಮಕಿ



**ಬೆಳಗಾವಿ:** ರಾಜ್ಯದಲ್ಲಿ ಆದಷ್ಟು ಬೇಗ ನಗರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ಘೋಷಣೆ ಮಾಡಲಾಗುವುದು ಎಂದು ಸಚಿವ ರಹೀಂ ಖಾನ್ ಮಾಹಿತಿ ನೀಡಿದರು.

ವಿಧಾನ ಪರಿಷತ್ ಪ್ರಶ್ನೋತ್ತರ ಕಲಾಪದಲ್ಲಿ ಮಂಗಳವಾರ ಬಿಜೆಪಿ ಸದಸ್ಯ ಪ್ರತಾಪ್ ಸಿಂಹ ನಾಯಕ್ ಪ್ರಶ್ನೆ ಕೇಳಿದರು. ರಾಜ್ಯದ ಹಲವಾರು ನಗರ ಸ್ಥಳೀಯ ಸಂಸ್ಥೆಗಳ (ಪಟ್ಟಣ ಪಂಚಾಯಿತಿ, ಪುರಸಭೆ, ನಗರಸಭೆ) ಅವಧಿ ಮುಗಿದರೂ ಚುನಾವಣೆಗಳು ನಡೆಯುತ್ತಿಲ್ಲ. ಕೂಡಲೇ ಚುನಾವಣೆ ನಡೆಸಬೇಕು. ಪ್ರಜಾಪ್ರಭುತ್ವದ ಆಶಯಕ್ಕೆ ನಾವು ನ್ಯಾಯ ಕೊಡುತ್ತಿಲ್ಲ. ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಚುನಾವಣೆ ಆಗಿ 5 ವರ್ಷ ಆಗಿದೆ. ಜಿಬಿಎ ಚುನಾವಣೆ ಆಗಿ ವರ್ಷಗಳೇ ಕಳೆಯಿತು. ಚುನಾವಣಾ ಆಯೋಗ ಕೋರ್ಟ್‌ಗೆ ಹೋಗಿ ಚುನಾವಣೆ ಮಾಡಿಸಿ ಅನ್ನೋ ಹಂತಕ್ಕೆ ಬಂದಿದೆ. ಸ್ಥಳೀಯ ಸಂಸ್ಥೆಗಳ ಚುನಾವಣೆ ಸಮಯಕ್ಕೆ ತಕ್ಕಂತೆ



ನಡೆಸಬೇಕು. ಜನರ ಸಮಸ್ಯೆ, ರೈತರ ಸಮಸ್ಯೆಗೆ ಉತ್ತರ ಸಿಕ್ಕಿಲ್ಲ. ಮೊದಲು ಚುನಾವಣೆ ನಡೆಸಿ ಎಂದು ಆಗ್ರಹಿಸಿದರು.

ಇದಕ್ಕೆ ಸಚಿವ ರಹೀಂಖಾನ್ ಉತ್ತರ ನೀಡಿ, ರಾಜ್ಯದಲ್ಲಿ 187 ನಗರ ಸ್ಥಳೀಯ ಸಂಸ್ಥೆಗಳ ಅವಧಿ ಮುಕ್ತಾಯವಾಗಿದೆ. ಅವಧಿ ಮುಗಿದು 1 ತಿಂಗಳು ಮಾತ್ರ ಆಗಿದೆ. ಈಗಾಗಲೇ ಫೈಲ್ ರೆಡಿ ಮಾಡಲಾಗಿದೆ. ಮೀಸಲಾತಿ ಮತ್ತು ಡಿಲಿಮಿಟೇಷನ್ ಕೆಲಸ ನಡೆಯುತ್ತಿದೆ. ಹೀಗಾಗಿ ನಮಗೆ ಸಮಯ ಬೇಕು. ಕೆಲವು ಸ್ಥಳೀಯ ಸಂಸ್ಥೆಗಳು ಅಪ್‌ಗ್ರೇಡ್ ಆಗಿದೆ. ಹೀಗಾಗಿ ತಡವಾಗುತ್ತಿದೆ ಎಂದು ತಿಳಿಸಿದರು.

ನಗರ ಸ್ಥಳೀಯ ಸಂಸ್ಥೆ ಚುನಾವಣೆ ನಡೆಸೋ ಇಚ್ಛೆ ನಮ್ಮ ಸರ್ಕಾರಕ್ಕೆ ಇದೆ. ಆದಷ್ಟು ಬೇಗ ಚುನಾವಣೆ ಮಾಡುತ್ತೇವೆ. ಹಿಂದೆ ಬಿಜೆಪಿ ಅವಧಿಯಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರ ಚುನಾವಣೆ ಆಗಿರಲಿಲ್ಲ. ಅದನ್ನು ಮಾಡಿದ್ದು ನಮ್ಮ ಸರ್ಕಾರ ಎಂದ ರಹೀಂಖಾನ್ ಪುಟ 4ಕ್ಕೆ

## ಆಜಾನ್‌ನಿಂದ ಶಬ್ದಮಾಲಿನ್ಯ

### ಆಡಳಿತ-ವಿಪಕ್ಷಗಳ ನಡುವೆ ಗಲಾಟೆ | ಬಿಜೆಪಿ ಸದಸ್ಯರ ಆಕ್ರೋಶ

**ಬೆಳಗಾವಿ:** ಮಸೀದಿಗಳಲ್ಲಿ ಮುಂಜಾನೆಯೇ ಕೂಗುವ ಆಜಾನ್‌ನಿಂದ ಶಬ್ದಮಾಲಿನ್ಯ ಆಗುತ್ತಿರುವ ಬಗ್ಗೆ ವಿಧಾನ ಪರಿಷತ್‌ನಲ್ಲಿ ಮಂಗಳವಾರ ಆಡಳಿತ-ವಿಪಕ್ಷಗಳ ನಡುವೆ ಗದ್ದಲ ಗಲಾಟೆಗೆ ಕಾರಣವಾಯಿತು.

ಪ್ರಶ್ನೋತ್ತರ ಕಲಾಪದಲ್ಲಿ ಮಂಗಳವಾರ ಬಿಜೆಪಿ ಸದಸ್ಯ ಡಿ.ಎಸ್ ಅರುಣ್ ಮಾತನಾಡಿ, ಆಜಾನ್ ಕೂಗುವಾಗ ಶಬ್ದ ಮಾಲಿನ್ಯ ಆಗುತ್ತಿದೆ. ನಿಯಮದ ಪ್ರಕಾರ ಬೆಳಗ್ಗೆ 6ರಿಂದ 10ರ ತನಕ ಯಾವುದೇ ಶಬ್ದಮಾಲಿನ್ಯ ಆಗಬಾರದು. ನನ್ನ ಮನೆಯ ಹಿಂದೆಯೇ ಮಸೀದಿ ಇದೆ. ಮುಂಜಾನೆ 4:45ಕ್ಕೆ ಆಜಾನ್ ಶುರುವಾಗುತ್ತೆ. ನಮ್ಮ ತಂದೆಗೆ 86 ವರ್ಷ ಆಜಾನ್ ಸೌಂಡ್‌ಗೆ ಎದ್ದು ಕೂರಬೇಕು. ಸುತ್ತಮುತ್ತಲಿನ ಮನೆಯವರಿಗೂ ಸಮಸ್ಯೆ ಆಗಿದೆ. ಗಣೇಶೋತ್ಸವ ಸಮಯದಲ್ಲಿ ಡಿಜೆ ಹಾಕಬಾರದು ಅಂತ ಆರ್ಡರ್ ಮಾಡ್ತೀರಾ ಮತ್ತು ಡಿಜೆ ಜಪ್ತಿ ಮಾಡ್ತೀರಾ. ಮಸೀದಿಗೆ ಹೋಗಿ ವಿನಂತಿ ಮಾಡಿದರೂ ಬಂದ್ ಮಾಡಲ್ಲ. ಪೊಲೀಸರಿಗೆ ಆಜಾನ್ ಶಬ್ದಮಾಲಿನ್ಯ ನಿಲ್ಲಿಸೋ ಧಮ್ ಇಲ್ಲ. ಸುಪ್ರೀಂಕೋರ್ಟ್ ಆದೇಶ



ವನ್ನು ಸರ್ಕಾರ ಪಾಲನೆ ಮಾಡಬೇಕು ಎಂದು ಆಗ್ರಹಿಸಿದರು.

ಇದಕ್ಕೆ ಸಚಿವ ಈಶ್ವರ್ ಖಂಡ್ರೆ ಉತ್ತರ ನೀಡಿ, ಶಬ್ದ ಮಾಲಿನ್ಯ ಎಲ್ಲಾ ಕಡೆ ಇದೆ. ಸುಪ್ರಿಂಕೋರ್ಟ್ ತೀರ್ಪಿನಂತೆ ವಸತಿ ಪ್ರದೇಶಗಳಲ್ಲಿ 50 ಡೆಸಿಬಲ್‌ಗಿಂತ ಹೆಚ್ಚಿರಬಾರದು. ಸರ್ಕಾರವೇ ಕಾನೂನು ಮಾಡಿದೆ. ಸಮಿತಿ ರಚನೆ ಮಾಡಿ ಡಿವೈಎಸ್ಪಿ, ಎಸಿಪಿ ಅಧ್ಯಕ್ಷತೆಯಲ್ಲಿ ಅನುಷ್ಠಾನಕ್ಕೆ ಜವಾಬ್ದಾರಿ ನೀಡಲಾಗಿದೆ. ದೂರು ಬಂದ ಪುಟ 2ಕ್ಕೆ

## ಬೋನಿಗೆ ಬಿದ್ದ ಚಿರತೆ

**ಎಚ್.ಡಿ.ಕೋಟೆ:** ತಾಲ್ಲೂಕಿನ ಕೆ.ಎಂ.ಹುಂಡಿ ಗ್ರಾಮದಲ್ಲಿ ಬೋನಿಟ್ಟ 24 ಗಂಟೆಯೊಳಗೆ ಚಿರತೆ ಸೆರೆಯಾಗಿದೆ. ಕಳೆದ ಕೆಲವು ದಿನಗಳ ಹಿಂದೆ ಗ್ರಾಮದಲ್ಲಿ ಚಿರತೆ ಕಾಣಿಸಿಕೊಂಡಿದ್ದರಿಂದ ರೈತರು ಸೆರೆಹಿಡಿಯುವಂತೆ ಸಾಮಾಜಿಕ ಅರಣ್ಯಾಧಿಕಾರಿ ಕಚೇರಿಗೆ ಮನವಿ ಸಲ್ಲಿಸಿದ್ದರು. ಗ್ರಾಮದ ನಂಜೇಗೌಡ ಅವರ ಜಮೀನಿನಲ್ಲಿ ಸೆರೆಯಾಗಿದ್ದು ಗಂಡು ಚಿರತೆಯಾಗಿದೆ. 3 ವರ್ಷದ್ದು ಎಂದು ಅಂದಾಜಿಸಲಾಗಿದೆ.

ಸೆರೆ ಸಿಕ್ಕ ಚಿರತೆಯನ್ನು ಚಿಕಿತ್ಸೆಗೆ ಒಳಪಡಿಸಲಾಗಿದೆ. ವೈದ್ಯರು ಪರಿಶೀಲನೆ ನಡೆಸುತ್ತಿದ್ದಾರೆ. ಬಳಿಕ ಮೇಲಾಧಿಕಾರಿಗಳ ನಿರ್ದೇಶನದಂತೆ ಕ್ರಮ ಕೈಗೊಳ್ಳಲಾಗುವುದು ಎಂದು ಅರಣ್ಯ ವಲಯಾಧಿಕಾರಿ ರವಿಕುಮಾರ್ ತಿಳಿಸಿದ್ದಾರೆ.



## ರೂಪಾಯಿ ಮೌಲ್ಯ ದಾಖಲೆ ಕುಸಿತ

**ಡಾಲರ್ ಎದುರು 91 ರೂ.ಗೆ ಐತಿಹಾಸಿಕ ಇಳಿಕೆ ಕಂಡ ರೂಪಾಯಿ**

**ಮುಂಬೈ:** ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಡಾಲರ್ ಎದುರು ರೂಪಾಯಿ ಮೌಲ್ಯ ದಾಖಲೆ ಪ್ರಮಾಣದಲ್ಲಿ ಕುಸಿದಿದೆ. ಮಂಗಳವಾರದ ವಹಿವಾಟಿನಲ್ಲಿ ಬರೊಬ್ಬರಿ 36 ಪೈಸೆ ಕುಸಿತ ಕಂಡಿದೆ. ಇದೇ ಮೊದಲ ಬಾರಿಗೆ 91 ರೂ. ಗಳಿಗೆ ಇಳಿದಿದೆ.

ನಿರಂತರ ಎಫ್‌ಐಐ ಹೊರ ಹರಿವು ಮತ್ತು ಭಾರತ-ಯುಎಸ್ ವ್ಯಾಪಾರ ಒಪ್ಪಂದದ ಬಗ್ಗೆ ಸ್ಪಷ್ಟತೆಯ ಕೊರತೆಯಿಂದಾಗಿ ಕುಸಿತ ಸಂಭವಿಸಿದೆ ಎಂದು



ಹೇಳಲಾಗಿದೆ. ಕಳೆದ 10 ವಹಿವಾಟು ಅವಧಿಗಳಲ್ಲಿ ರೂಪಾಯಿ ಮೌಲ್ಯ ಡಾಲರ್ ಎದುರು 90ರಿಂದ 91 ರೂ.ಗೆ ಕುಸಿದಿದೆ. ಕಳೆದ ಐದು ಅವಧಿಗಳಲ್ಲೇ ಸ್ಥಳೀಯ ಘಟಕವು ಗ್ರೀನ್‌ಬ್ಯಾಕ್ ವಿರುದ್ಧ ಶೇ. 1ರಷ್ಟು ಕುಸಿದಿದೆ. ಇಂದಿನ ದಿನದ ಮುಕ್ತಾಯಕ್ಕಿಂತ 36 ಪೈಸೆ ಕಡಿಮೆಯಾಗಿದೆ. ಪುಟ 2ಕ್ಕೆ

**ವ್ಯಾಪಾರ ಅನಿಶ್ಚಿತತೆ ಕಾರಣ**

ರೂಪಾಯಿ ಮೌಲ್ಯ ಚಂಚಲಾವಣೆ ಮೇಲೆ ಭಾರತ ಮತ್ತು ಅಮೆರಿಕ ನಡುವಿನ ಬಹುನಿರೀಕ್ಷಿತ ಒಪ್ಪಂದ ಕಾರಣ ಎಂದು ಹೇಳಲಾಗಿದೆ. ಈ ಕುರಿತು ಮಾತನಾಡಿರುವ ಫಿನ್ರೆಕ್ಸ್ ಟ್ರೆಷರಿ ಅಡ್ವೈಸರ್ಸ್ ಮುಖ್ಯಸ್ಥ ಮತ್ತು ಕಾರ್ಯನಿರ್ವಾಹಕ ನಿರ್ದೇಶಕ ಅನಿಲ್ ಕುಮಾರ್ ಬನ್ಸಾಲಿ ಅವರು, ಅನಿಶ್ಚಿತತೆಯು ಚೇತರಿಕೆಯನ್ನು ಮರೆಮಾಡಿದೆ. ಪ್ರತಿದಿನ ಡಾಲರ್ ಖರೀದಿ ನಡೆಯುತ್ತಿದೆ ಎಂದು ಹೇಳಿದರು. ಪುಟ 4ಕ್ಕೆ

# ಶಿವರಾತ್ರೀಶ್ವರರು ಸಮಾಜಕ್ಕೆ ಬೆಳಕಿನ ದೀವಿಗೆ

### ಸುತ್ತೂರು ಮಠದ ಶೈಕ್ಷಣಿಕ, ಸಾಮಾಜಿಕ ಕಾರ್ಯಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಶ್ಲಾಘನೆ

**ಮಳವಳ್ಳಿ:** ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ತ್ಯಾಗ ಮತ್ತು ಅಧ್ಯಾತ್ಮಿಕ ಶಕ್ತಿಗಳು ಬೆಳಕಿನ ದೀವಿಗೆಗಳಂತೆ. 8ನೇ ಶತಮಾನದಲ್ಲಿ ಮಠವನ್ನು ಸ್ಥಾಪಿಸಿದ ಶಿವಯೋಗಿಗಳು ಅಖಂಡ ಗುರು. ಅವರ ನಂತರ ಶಿವರಾತ್ರಿ ಶ್ರೀ ರಾಜೇಂದ್ರ ಸ್ವಾಮೀಜಿಗಳು ಶೈಕ್ಷಣಿಕ ಮತ್ತು ಸಾಮಾಜಿಕ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸಿದ್ದರು ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಸ್ಮರಿಸಿದರು.

ನಗರದಲ್ಲಿ ಮಂಗಳವಾರ ಸುತ್ತೂರು ವೀರಸಿಂಹಾಸನ ಮಹಾಸಂಸ್ಥಾನ ಮಠದ ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ 1,066ನೇ ಜಯಂತಿ ಮಹೋತ್ಸವಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಸುತ್ತೂರು ಮಠವು ಹಮ್ಮಿಕೊಂಡಿರುವ ಸೇವಾ ಕಾರ್ಯಗಳನ್ನು, ಮಠದ ಸ್ವಾಮೀಜಿಗಳನ್ನು ಮುಕ್ತಕಂಠದಿಂದ ಶ್ಲಾಘಿಸಿದರು. ಪುಟ 2ಕ್ಕೆ







**ಬಡ ಮಕ್ಕಳ ಶಿಕ್ಷಣಕ್ಕೆ ಮಠದ ಆದ್ಯತೆ: ಎಚ್‌ಡಿಕೆ**

ಮಳವಳ್ಳಿ: ಸುತ್ತೂರು ಮಠ ಸಮಾಜದ ಬಡ ವರ್ಗಗಳ ಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು. ಶ್ರೀ ಶಿವರಾತ್ರಿಶ್ವರ ಶಿವಯೋಗಿ ಮಹಾಸ್ವಾಮೀಜಿಯವರ 1066ನೇ ಜನ್ಮ ದಿನಾಚರಣೆ ಮಾತನಾಡಿದ ಅವರು, ಸುತ್ತೂರು ಮಠಕ್ಕೂ ನಮ್ಮ ಕುಟುಂಬಕ್ಕೂ 1962ರಿಂದಲೂ ನಂಟು ಇದೆ. ಎಚ್.ಡಿ.ದೇವೇಗೌಡ ಅವರು ರಾಜಕೀಯ ಪ್ರವೇಶ ಮಾಡಿದಾಗಿನಿಂದ ಸುತ್ತೂರು ಮಠದ ಪುಟ 2ಕ್ಕೆ





ಮೊದಲ ಪುಟದಿಂದ

## ಆಜಾನ್‌ನಿಂದ ಶಬ್ದಮಾಲಿನ್ಯ

ಸಂದರ್ಭದಲ್ಲಿ ಕ್ರಮಕೈಗೊಳ್ಳಲು ಈಗಾಗಲೇ ಸೂಚನೆ ನೀಡಲಾಗಿದೆ. ಪರಿಸರ ಅಧಿಕಾರಿ ತಪಾಸಣೆ ಮಾಡಿ, ನಿಯಮಾನುಸಾರ ಎಷ್ಟು ಡೆಸಿಬಲ್ ಇದೆ ಎಂಬುದನ್ನು ಚೆಕ್ ಮಾಡ್ತಾರೆ. ಅನೇಕ ಧಾರ್ಮಿಕ ಕಾರ್ಯಕ್ರಮಗಳು ನಡೆಯುತ್ತವೆ. ಕೇವಲ ಆಜಾನ್ ಮಾತ್ರವಲ್ಲ. ಮದುವೆ ಸಮಾರಂಭ, ಎಲ್ಲ ತರಹದ ಧಾರ್ಮಿಕ ಕಾರ್ಯಕ್ರಮಗಳೂ ರಾತ್ರಿ ನಡೆಯುತ್ತವೆ. ಇದನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡ್ತೇವೆ ಎಂದರು. ಸಚಿವ ಈಶ್ವರ್ ಖಂಡ್ರೆ ಮತ್ತೆ ಉತ್ತರ ನೀಡಿ, ಇದು ಸೂಕ್ಷ್ಮವಾದ ವಿಚಾರ ಎಂದರು. ಇದಕ್ಕೆ ಅರುಣ್ ಆಕ್ಷೇಪ ವ್ಯಕ್ತಪಡಿಸಿ ಯಾಕೆ ಸೂಕ್ಷ್ಮ ವಿಚಾರ? ಇವರಿಗೆ ಸುಪ್ರಿಂ ಆದೇಶ ಪಾಲಿಸೋ ಧಮ್ ಇಲ್ಲ ಅಂತ ಕಿಡಿಕಾರಿದರು. ಈಶ್ವರ್ ಖಂಡ್ರೆ ಮಾತಾಡಿ, ರಾಜಕೀಯಕ್ಕೆ ಇದನ್ನು ಬಳಸಬೇಡಿ, ದೀಪಾವಳಿಯಲ್ಲಿ ಪಟಾಕಿ ಸಿಡಿಸಿ ಶಬ್ದಮಾಲಿನ್ಯ ಆಗುತ್ತದೆ ಎಂದರು. ಇದಕ್ಕೆ ಮತ್ತೆ ಬಿಜೆಪಿ ಸದಸ್ಯರು ತೀವ್ರ ಆಕ್ರೋಶ ವ್ಯಕ್ತಪಡಿಸಿ, ದೀಪಾವಳಿ ಬಗ್ಗೆ ಮಾತಾಡಬೇಡಿ. ನಾವು ಕೇಳಿದ್ದಕ್ಕೆ ಉತ್ತರ ಕೊಡಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

## ಮುಂದಿನ ಮುಖ್ಯಮಂತ್ರಿ ಯಾರು?

ಸಿದ್ದರಾಮಯ್ಯ ಟಾಂಗ್ ಕೊಟ್ಟರು. ಕುಣಿಗಲ್ ಕಾಂಗ್ರೆಸ್ ಶಾಸಕ ರಂಗನಾಥ್ ಪ್ರಶ್ನೆಗೆ ಉತ್ತರ ಕೊಡ್ತಿದ್ದ ಸಿಎಂ, ನಮ್ಮ ಮೇಲೆ ವಿಶ್ವಾಸ ಇಡಿ. ತಾರತಮ್ಯ ಆಗಿದ್ದರೆ ಸಮಸ್ಯೆ ಬಗೆಹರಿಸ್ತೇವೆ ಎಂದರು. ಈ ವೇಳೆ ಅಶೋಕ್ ಮಧ್ಯಪ್ರವೇಶಿಸಿ, ತಾರತಮ್ಯ ಬೇಕು ಅಂತ ಮಾಡಿದ್ದಾರೆ ಅಂದ್ರು. ಅದಕ್ಕೆ ಸಿಎಂ, ನೀನು ಉರಿಯುತ್ತಿರುವ ಬೆಂಕಿಗೆ ತುಪ್ಪ ಹಾಕಬೇಡ ಎಂದರು. ಹಾಗಾದರೆ ಉರಿಯುತ್ತಿದೆ ಎಂಬುದು ನಿಜ ಆಯ್ತು ಎಂದು ಅಶೋಕ್ ಕೆಣಕಿದರು. ಅದು ಗಾದೆ ಮಾತು ಕಣಯ್ಯ ಅಂತ ಸಿಎಂ ತಿರುಗೇಟು ನೀಡಿದರು. ಈ ವೇಳೆ ಅಶೋಕ್ ಮಾತನಾಡಿ, ಕುಣಿಗಲ್ ರಂಗನಾಥ್ ಅವರು ಡಿಕೆಶಿ ಸಿಎಂ ಆಗಲಿ ಎಂದು ಪೂಜೆ, ಪುನಸ್ಕಾರ ಮಾಡ್ತಿದ್ದಾರೆ ಎಂದರು. ರಂಗನಾಥ್ ಮಾತನಾಡಿ, ಪೂಜೆ ಪುನಸ್ಕಾರ ಮಾಡ್ತಿರೋದು ನಮ್ಮ ಕ್ಷೇತ್ರಕ್ಕಾಗಿ ಎಂದರು. ಸಿಎಂ ಉರಿಯುತ್ತಿರೋದಕ್ಕೆ ತುಪ್ಪ ಹಾಕಬೇಡ ಅಂದರು. ಅಲ್ಲಿಗೆ ಜಗಳ ಹೊತ್ತಿ ಉರೀತಿದೆ ಅಂತ ಅರ್ಥ ಎಂದು ಅಶೋಕ್ ಟಾಂಗ್ ಕೊಟ್ಟರು.

## ಐದು ವರ್ಷ ಸಿಎಂ ಆಗೀರ್ತೀರಾ?

ಯಾವಾಗಲೂ ನಿಮ್ಮ ಜತೆ ಪರಮೇಶ್ವರ್ ಅವರೊಬ್ಬರೇ ನಿಂತಿದ್ದಾರೆ ಸರ್, ಏನಾದರೂ ಅವಕಾಶ ಆದರೆ ಬ್ಲ್ಯಾಕ್ ಹಾರಿಸ್ತಾರೆ ಎಂದು ಅಶೋಕ್ ಟಾಂಗ್ ಕೊಟ್ಟರು. 140 ಶಾಸಕರು ನಮ್ ಜತೆ ಇದ್ದಾರೆ. ಜನ ಐದು ವರ್ಷಕ್ಕೆ ಆಶೀರ್ವಾದ ಮಾಡಿದ್ದಾರೆ. 2028ಕ್ಕೂ ನಾವೇ ಬರ್ತೀವೆ. ಬಿಜೆಪಿಯನ್ನು ಜನ ಯಾವತ್ತೂ ಅಧಿಕಾರಕ್ಕೆ ತರಲ್ಲ. ಜನರ ಆಶೀರ್ವಾದ ಪಡ್ಕೊಂಡು ಬಂದಿದ್ದೀರಾ ನೀವು? ಆಪರೇಷನ್ ಕಮಲ ಮಾಡಿ ಹಿಂಬಾಗಿಲ ಮೂಲಕ ಅಧಿಕಾರಕ್ಕೆ ಬಂದಿದ್ರಿ. ಜನ ನಿಮಗೆ ಆಶೀರ್ವಾದ ಮಾಡಲ್ಲ ಅಂತ ಸಿಎಂ ಟಾಂಗ್ ಕೊಟ್ಟರು. ನೀವ್ಯಾಕೆ ಜೆಡಿಎಸ್ ಜತೆ ಹೋದ್ರಿ ಅಂತ ಬಿಜೆಪಿಗೆ ಸಿಎಂ ಪ್ರಶ್ನಿಸಿದಾಗ ಪ್ರಿಯಾಂಕ್ ಖರ್ಗೆ ಎದ್ದು ನಿಂತು ಬೆಂಬಲ ಸೂಚಿಸಿದರು. ಆಗ ಅಶೋಕ್ ಬೆಂಬಲಕ್ಕೆ ಅರವಿಂದ್ ಬೆಲ್ಲದ್, ಸುನಿಲ್ ಕುಮಾರ್ ಬಂದರು.

## ಬಡ ಮಕ್ಕಳ ಶಿಕ್ಷಣಕ್ಕೆ ಆದ್ಯತೆ

**ಆಶೀರ್ವಾದ ನಮ್ಮ ಕುಟುಂಬದ ಮೇಲೆ ಇದೆ. ನಮ್ಮ ತಂದೆ ಸುತ್ತೂರು ಮಠವನ್ನು ಎಂದಿಗೂ ಮರೆಯಬೇಡ ಎಂದು ನನಗೆ ಹೇಳಿದ್ದಾರೆಂದು ಎಂದು ತಿಳಿಸಿದರು. ರಾಷ್ಟ್ರಪತಿಗಳು ಪ್ರಥಮ ಬಾರಿಗೆ ನಮ್ಮ ಜಿಲ್ಲೆಗೆ ಬಂದಿದ್ದಾರೆ. ಇನ್ನೂ ಮುಂದೆ ಜಿಲ್ಲೆಗೆ ಅಭಿವೃದ್ಧಿ ಕೆಲಸಗಳು ಹೆಚ್ಚುತ್ತಿವೆ. ಕೇವಲ ರಾಜ್ಯವಲ್ಲದೆ ಅನೇಕ ಅಂತಾರಾಷ್ಟ್ರೀಯ ದೇಶಗಳಲ್ಲೂ ಬಡ ವರ್ಗಗಳ ಆರೋಗ್ಯ ಮತ್ತು ಶಿಕ್ಷಣಕ್ಕೆ ಆದ್ಯತೆಯನ್ನು ಸುತ್ತೂರು ಮಠ ನೀಡಿದೆ ಎಂದು ಅವರು ಹೇಳಿದರು.**

## ಶಿವರಾತ್ರೀಶ್ವರರು ಬೆಳಕಿನ ದೀವಿಗೆ

ನಾಳಿನ ಭಾರತಕ್ಕಾಗಿ ಯುವಜನರಲ್ಲಿ ಇಂಥ ಮಠಗಳು ಸ್ಫೂರ್ತಿ ತುಂಬಬೇಕು. ಕರ್ನಾಟಕವು ಇಂಥ ಹಲವು ಮಠಗಳ ಸೇವೆಯನ್ನು ಕಂಡಿದೆ. ಕಾಯಕವೇ ಕೈಲಾಸ ಎಂಬುದು ಸಂತರಿಗೆ ಬರಿಯ ಮಾತಾಗದೆ, ಬದುಕಿನ ಭಾಗವೇ ಆಗಿತ್ತು ಎಂದು ಮುರ್ಮು ಅಭಿಪ್ರಾಯಪಟ್ಟರು.

ಇಂದಿನ ಕ್ಷಿಪ್ರ ಬದಲಾವಣೆ ಮತ್ತು ಅನಿಶ್ಚಿತತೆಯ ಕಾಲದಲ್ಲಿ ನೈತಿಕ ನಾಯಕತ್ವ ಯುವಜನರಲ್ಲಿ ಮೂಡಬೇಕು. 2047ರ ಹೊತ್ತಿಗೆ ಭಾರತದಲ್ಲಿ ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ಒಳಗೊಳ್ಳುವಿಕೆ, ಅಭಿವೃದ್ಧಿ ಮತ್ತು ಮಾನವೀಯತೆ ಒಟ್ಟಿಗೇ ಸಾಗಬೇಕು ಎಂದು ಹೇಳಿದರು.

8ನೇ ಶತಮಾನದಲ್ಲಿ ಮಠ ಸ್ಥಾಪಿಸಿದ ಶಿವಯೋಗಿ ಸ್ವಾಮಿಗಳ ಬದುಕು, ದರ್ಶನ ಮತ್ತು ಸಂದೇಶಗಳು ಅನನ್ಯ. ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಧರ್ಮ, ಶಿಕ್ಷಣ, ಸಂಸ್ಕೃತಿ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ಅವರ ಬೋಧನೆಗಳು ಹಲವು ತಲೆಮಾರುಗಳಿಗೆ ಮಾರ್ಗದರ್ಶಕವಾಗಿವೆ. ಸಾಮಾಜಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಯಲ್ಲಿ ಮಹತ್ತರ ಪಾತ್ರ ವಹಿಸಿರುವ ಸುತ್ತೂರು ಮಠದ ಜೆಎಸ್‌ಎಸ್ ಮಹಾವಿದ್ಯಾಪೀಠವು ದೇಶ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾಗಿದೆ. ಸುಸ್ಥಿರ ಅಭಿವೃದ್ಧಿಯ ವಿಷಯದಲ್ಲಿ ಸುತ್ತೂರು ಮಠವು ಆಧಾರಸ್ತಂಭದಂತೆ ನಿಂತಿದೆ ಎಂದು ಬಣ್ಣಿಸಿದರು.

ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಸ್ಮರಣ ಸಂಚಿಕೆ ಬಿಡುಗಡೆ ಮಾಡಿದರು. ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಶಾಸಕ ಪಿ.ಎಂ.ನರೇಂದ್ರಸ್ವಾಮಿ, ಕನಕಪುರ ಶ್ರೀದೇಗುಲ ಮಠದ ಚನ್ನಬಸವ ಸ್ವಾಮೀಜಿ ಮತ್ತಿತರರು ಭಾಗವಹಿಸಿದ್ದರು.

## ಹಣವನ್ನು ಕಮೋಡ್‌ಗೆ ಸುರಿದ ಅಧಿಕಾರಿ!

ಅವರ ನಿವಾಸ ಹಾಗೂ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಚೇರಿ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿ ಸುದೀರ್ಘ ಪರಿಶೀಲನೆ ನಡೆಸುತ್ತಿದ್ದಾರೆ.

ಮಂಗಳವಾರ ಬೆಳಗ್ಗೆಯಿಂದಲೇ ಅಧಿಕಾರಿಗಳು ದಾಖಲೆಗಳು, ಬ್ಯಾಂಕ್ ಖಾತೆಗಳು, ಆಸ್ತಿ ದಾಖಲೆಗಳು ಸೇರಿದಂತೆ ವಿವಿಧ ದಾಖಲೆಗಳ ಪರಿಶೀಲನೆಯಲ್ಲಿ ತೊಡಗಿದ್ದಾರೆ. ಇದರ ಜೊತೆಗೆ, ರೂಪ್ಲಾ ನಾಯ್ಕ್ ಅವರ ಕುಟುಂಬ ನೆಲೆಸಿರುವ ಬೆಂಗಳೂರಿನ ನಿವಾಸದ ಮೇಲೂ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ್ದಾರೆ.

ವಿಜಯನಗರ ಡಿಎಚ್‌ಒ ಡಾ.ಎಲ್.ಆರ್. ಶಂಕರನಾಯ್ಕ್ ಅವರ ಮನೆ, ಕಚೇರಿ ಹಾಗೂ ಪತ್ನಿ ನಿರ್ವಹಿಸುತ್ತಿರುವ ಖಾಸಗಿ ಆಸ್ಪತ್ರೆಯ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿ ಪರಿಶೀಲನೆ ನಡೆಸಿದರು. ಶಂಕರನಾಯ್ಕ್ ಅವರು ತಮ್ಮ ಮನೆಯ ಸಮೀಪ ಖಾಸಗಿ ಆಸ್ಪತ್ರೆ ನಡೆಸುತ್ತಿದ್ದಾರೆ. ಲೋಕಾಯುಕ್ತ ಅಧಿಕಾರಿಗಳು ಅಲ್ಲಿಗೆ ತೆರಳಿ ಪರಿಶೀಲನೆ ನಡೆಸಿದರು.

## ರೂಪಾಯಿ ಮೌಲ್ಯ ದಾಖಲೆ ಕುಸಿತ

ಇಂಟರ್ ಬ್ಯಾಂಕ್ ವಿದೇಶಿ ವಿನಿಮಯದಲ್ಲಿ, ಡಾಲರ್ ಎದುರು ರೂಪಾಯಿ 90.87ಕ್ಕೆ ಪ್ರಾರಂಭವಾಯಿತು ಮತ್ತು ವಹಿವಾಟು ಮುಂದುವರೆದಂತೆ ನಷ್ಟವನ್ನು ಮುಂದುವರೆಸಿತು. ಸೋಮವಾರ ರೂಪಾಯಿ ಅಮೆರಿಕ ಡಾಲರ್ ಎದುರು 90.78ರ ಹೊಸ ಸಾರ್ವಕಾಲಿಕ ಕನಿಷ್ಠ ಮಟ್ಟದಲ್ಲಿ ಸ್ಥಿರವಾಗಿತ್ತು. ಹಿಂದಿನ ಮುಕ್ತಾಯಕ್ಕಿಂತ 29 ಪೈಸೆ ನಷ್ಟವನ್ನು ದಾಖಲಿಸಿತು.

## ಸದನದಲ್ಲಿ ಟಕ್ಕರ್, ಪ್ರತಿ ಟಕ್ಕರ್

ಹೋಲಿಕೆ ಮಾಡಬೇಡಿ. ಸರ್ಕಾರ ವಿಚಾರದಲ್ಲಿ ನಾವು ಬಹುವಚನ. ಈಗಲೂ ನಾನೇ ಮುಖ್ಯಮಂತ್ರಿ. ನಮ್ಮಲ್ಲಿ ಹೈಕಮಾಂಡ್ ಇದೆ. ಹೈಕಮಾಂಡ್ ಏನು ತೀರ್ಮಾನ ಮಾಡ್ತಾರೋ ಅದರಂತೆ ಕೇಳ್ತೇವೆ. ಜನ ನಮಗೆ ಆಶೀರ್ವಾದ ಮಾಡಿದ್ದಾರೆ. ಬಿಜೆಪಿವರಿಗೆ ಜನ ಆಶೀರ್ವಾದ ಮಾಡಲ್ಲ, ಇವರು ವಿಪಕ್ಷ ಸ್ಥಾನದಲ್ಲಿ ಶಾಶ್ವತವಾಗಿ ಇರ್ತಾರೆ ಅಂತ ಸಿದ್ದರಾಮಯ್ಯ ಟಾಂಗ್ ಕೊಟ್ಟರು. ಸುನಿಲ್ ಕುಮಾರ್ ಎದ್ದುನಿಂತು, ನಾನೇ ಮುಂದಿನ ಐದು ವರ್ಷ ಸಿಎಂ ಅಂದಿದ್ರಲ್ಲ. ನೀವು ಈಗೇನಂತೀರಿ ಎಂದು ಪ್ರಶ್ನಿಸಿದರು. ಸಿಎಂ ಪ್ರತಿಕ್ರಿಯಿಸಿ, ನೀವ್ಯಾಕೆ ಮೂರು ಜನ ಸಿಎಂ ಮಾಡಿದೀರಿ? ಈಗಲೂ ನಾನೇ ಮುಖ್ಯಮಂತ್ರಿ, ಮುಂದೇನೂ ಮುಖ್ಯಮಂತ್ರಿ. ಹೈಕಮಾಂಡ್ ಹೇಳುವವರೆಗೂ ನಾನೇ ಮುಖ್ಯಮಂತ್ರಿ ಎಂದು ಸಿಎಂ ಉತ್ತರ ಕೊಟ್ಟರು.

# ಶಿವಶಂಕರಪ್ಪ ನಿಧನಕ್ಕೆ ಸುತ್ತೂರು ಶ್ರೀಗಳ ಸಂತಾಪ

ಮೈಸೂರು: ಹಿರಿಯ ರಾಜಕೀಯ ಮುತ್ಸದ್ದಿ, ಶಾಸಕರು ಹಾಗೂ ಮಾಜಿ ಸಚಿವರಾದ ಶಾಮನೂರು ಶಿವಶಂಕರಪ್ಪನವರು ಭಾನುವಾರ ಸಂಜೆ ದೈವಾಧೀನರಾದುದು ದುಃಖದ ಸಂಗತಿ ಎಂದು ಸುತ್ತೂರು



ಮಠದ ಪೀಠಾಧಿಪತಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದ್ದಾರೆ.

ಈ ಕುರಿತು ಮಾಧ್ಯಮ ಪ್ರಕಟಣೆ ಹೊರಡಿಸಿರುವ ಅವರು, ಶಾಮನೂರು ಶಿವಶಂಕರಪ್ಪ ಸಜ್ಜನ ರಾಜಕಾಣಿಗಳೆಂದೇ ಹೆಸರಾಗಿದ್ದರು ಎಂದು ನೆನೆದಿದ್ದಾರೆ. ದಾವಣಗೆರೆ ಜಿಲ್ಲೆ ಶಾಮನೂರು ಗ್ರಾಮದ ಕೃಷಿಕ ಕುಟುಂಬದಲ್ಲಿ ಜನಿಸಿದವರು. ಬಿಎಸ್ಸಿ ಪದವೀಧರರು. ಅಕ್ಕಿಯ ವ್ಯಾಪಾರೋದ್ಯಮವನ್ನು ಪ್ರಾರಂಭಿಸಿ ಅದರಲ್ಲಿ ಯಶಸ್ವಿಯಾಗಿದ್ದರು. ಹಿಂದೆ ಚಿತ್ರದುರ್ಗ ಜಿಲ್ಲೆಯ ಭಾಗವಾಗಿದ್ದ ದಾವಣಗೆರೆ ನಗರಸಭೆಯ ಸದಸ್ಯರಾಗಿ ಆಯ್ಕೆಯಾಗಿ, ಬಳಿಕ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. 1994ರಲ್ಲಿ ಮೊದಲ ಬಾರಿಗೆ ದಾವಣಗೆರೆಯಿಂದ ವಿಧಾನಸಭೆಗೆ ಆಯ್ಕೆಯಾದರು. ಅನಂತರ ಸತತವಾಗಿ ಆರು ಬಾರಿ ಶಾಸಕರಾಗಿ ಆಯ್ಕೆಯಾದುದು ಅವರ ಜನಪ್ರಿಯತೆಗೆ ಹಿಡಿದ ಕೈಗನ್ನಡಿಯಾಗಿದೆ ಎಂದು ಸುತ್ತೂರು ಶ್ರೀಗಳು ಸಂತಾಪ ಸೂಚಕ ಸಂದೇಶದಲ್ಲಿ ಸ್ಮರಿಸಿದ್ದಾರೆ.

1998ರಲ್ಲಿ ಲೋಕಸಭೆಗೂ ಆಯ್ಕೆಯಾಗಿದ್ದರು. ಕಾಂಗ್ರೆಸ್ ಪಕ್ಷದಲ್ಲಿ ಐದು ದಶಕಗಳಿಂದ ರಾಜಕಾರಣದಲ್ಲಿದ್ದವರು. ದೇಶದ ಅತ್ಯಂತ ಹಿರಿಯ ಸಕ್ರಿಯ ರಾಜಕಾರಣಿಗಳಲ್ಲಿ ಒಬ್ಬರಾಗಿದ್ದರು. ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರಾಗಿ ಇಳಿ ವಯಸ್ಸಿನಲ್ಲೂ ಅತ್ಯಂತ ದಕ್ಷತೆಯಿಂದಕಾರ್ಯನಿರ್ವಹಿಸಿದ್ದರು. ಶಿಕ್ಷಣ ಪ್ರೇಮಿಗಳಾಗಿದ್ದರು. ಬಾಪೂಜಿ ಶಿಕ್ಷಣಸಂಸ್ಥೆಗಳ ಸಂಸ್ಥಾಪಕರಾಗಿ ತಾಂತ್ರಿಕ ಮತ್ತು ವೈದ್ಯಕೀಯ ಶಿಕ್ಷಣ ಕ್ಷೇತ್ರಗಳಲ್ಲಿ ಕ್ರಾಂತಿಯನ್ನೇ ಮಾಡಿದ್ದರು. ದಾವಣಗೆರೆಯನ್ನು ಶೈಕ್ಷಣಿಕ ಕೇಂದ್ರವಾಗಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭೆಯ ರಾಷ್ಟ್ರೀಯ ಅಧ್ಯಕ್ಷರಾಗಿ ಸಮರ್ಥವಾಗಿ ಮುನ್ನಡೆಸಿಕೊಂಡು ಹೋಗುತ್ತಿದ್ದರು. ಡಾ.ಶಾಮನೂರು ಶಿವಶಂಕರಪ್ಪ ಜನಕಲ್ಯಾಣ ಟ್ರಸ್ಟ್ ಮೂಲಕ ಹಲವಾರು ಜನಪರ ಕಾರ್ಯಕ್ರಮಗಳನ್ನು ಕೈಗೊಂಡಿದ್ದರು ಎಂದು ಶ್ರೀಗಳು ನೆನೆದಿದ್ದಾರೆ. ಶ್ರೀಮಠಕ್ಕೆ ಆಗಮಿಸುವ ಭಕ್ತಾದಿಗಳ ಅನುಕೂಲಕ್ಕಾಗಿ ಸುತ್ತೂರು ಶ್ರೀಕ್ಷೇತ್ರದಲ್ಲಿ ಅತಿಥಿಗೃಹವನ್ನು ನಿರ್ಮಿಸಿದ ಕೊಡುಗೈ ದಾನಿಗಳು ಎಂದು ಶ್ರೀಗಳು ಬಣ್ಣಿಸಿದ್ದಾರೆ.



ಸಾರ್ವಜನಿಕ ಜೀವನದಲ್ಲಿ ಸಜ್ಜನಿಕೆಯ ಮೂರ್ತಿಯಾಗಿದ್ದರು. ಸದಾ ಜನಪರ ನಿಲುವನ್ನು ಹೊಂದಿದ್ದರು. ಅವರ ರಾಜಕೀಯ ಜೀವನ ಒಂದು ತೆರೆದ ಪುಸ್ತಕವಾಗಿತ್ತು. ಅವರಿಗೆ ಎಲ್ಲ ಪಕ್ಷಗಳಲ್ಲಿಯೂ ಅಭಿಮಾನಿಗಳಿದ್ದರು. ಅವರೊಬ್ಬ ಅಜಾತಶತ್ರುಗಳಾಗಿದ್ದರು. ಅವರ ಅಗಲುವಿಕೆಯಿಂದ ಕರ್ನಾಟಕದ ಹಿರಿಯ ಚೇತನವೊಂದು ಅಸ್ತಂಗತವಾದಂತಾಗಿದೆ. ದಿವಂಗತರ ಆತ್ಮಕ್ಕೆ ಶಾಂತಿಯನ್ನು, ಅವರ ಕುಟುಂಬ ವರ್ಗದವರರು, ಬಂಧುಬಾಂಧವರು ಮತ್ತು ಅಪಾರ ಸಂಖ್ಯೆಯ ಅಭಿಮಾನಿಗಳಿಗೆ ಈ ಅಗಲುವಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ನೀಡಲೆಂದು ಹಾರೈಸುತ್ತೇವೆ ಎಂದು ತಿಳಿಸಿದ್ದಾರೆ.

### ರಾಜ್ಯಕ್ಕೆ ತುಂಬಲಾರದ ನಷ್ಟ



**ಹಿರಿಯರಾದ ಶಾಮನೂರು ಶಿವಶಂಕರಪ್ಪ ಅವರು ನಿಧನರಾದ ಸುದ್ದಿ ತಿಳಿದು ನನಗೆ ಆಘಾತವನ್ನುಂಟು ಮಾಡಿದೆ. ಕಷ್ಟ ಪಟ್ಟು ಏಕಾಂಗಿಯಾಗಿ ಬೆಳೆದ ದೇಶದ ಪ್ರತಿಷ್ಠಿತ ವ್ಯಕ್ತಿಗಳಲ್ಲಿ ಒಬ್ಬರಾದ ಶ್ರೀಯುತರ ನಿಧನ ನನಗೆ ದುಃಖವನ್ನುಂಟು ಮಾಡಿದೆ. ಸಮಾಜದ ಸಂಘಟನೆ, ಶಿಕ್ಷಣ ಕ್ಷೇತ್ರದ ವಿಸ್ತರಣೆ ಮತ್ತು ಸಮಾನತೆಯ ಚಿಂತನೆಗಾಗಿ ತಮ್ಮ ಸಂಪೂರ್ಣ ಜೀವನವನ್ನು ಸಮರ್ಪಿಸಿಕೊಂಡಿದ್ದ ಶಾಮನೂರು ಶಿವಶಂಕರಪ್ಪ, ವೀರಶೈವ ಲಿಂಗಾಯತ ಸಮಾಜದ ಅಪ್ರತಿಮ ನಾಯಕತ್ವದ ಪ್ರತೀಕವಾಗಿದ್ದರು ಅವರ ದೂರದೃಷ್ಟಿ, ಸೇವಾ ಮನೋಭಾವ ಮತ್ತು ಮೌಲ್ಯಾಧಾರಿತ ರಾಜಕೀಯ ನಡೆ ಮುಂದಿನ ತಲೆಮಾರಿಗೂ ಮಾರ್ಗದರ್ಶಕವಾಗಿರಲಿದೆ. ಈ ದುಃಖದ ಸಂದರ್ಭದಲ್ಲಿ ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ.**

▸▸ -ಜಿ.ಟಿ.ದೇವೇಗೌಡ ಶಾಸಕ

# ಸಡಗರದ ರಾಮೋತ್ಸವ

## ರಾಮನಗರದಲ್ಲಿ ವಿವಿಧ ಶಾಲೆಗಳ ವಿದ್ಯಾರ್ಥಿಗಳಿಂದ ನೃತ್ಯ, ಸಂಗೀತ ಪ್ರದರ್ಶನ ಸಾಂಸ್ಕೃತಿಕ ಚಟುವಟಿಕೆ

ರಾಮನಗರ: ಸಾಂಸ್ಕೃತಿಕ ವೇದಿಕೆಗಳು ವಿದ್ಯಾರ್ಥಿಗಳಲ್ಲಿ ಸೃಜನಶೀಲತೆಗೆ ಕಾರಣವಾಗುತ್ತದೆ. ವೈವಿಧ್ಯಮಯ ಪ್ರತಿಭೆಯನ್ನು ಅನಾವರಣಗೊಳಿಸಲು ಸಾಧ್ಯವಾಗುತ್ತದೆ. ಸಾಂಸ್ಕೃತಿಕ ಹಿನ್ನೆಲೆಗಳನ್ನು ಹಂಚಿಕೊಳ್ಳಲು ಸಹ ಸೂಕ್ತ ವೇದಿಕೆಗಳಾಗಿವೆ ಎಂದು ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎ.ಬಿ.ಚೇತನ್ ಕುಮಾರ್ ಹೇಳಿದರು.

ರಾಮೋತ್ಸವದ ಅಂಗವಾಗಿ ನಗರದ ಜೂನಿಯರ್ ಕಾಲೇಜು ಮೈದಾನದಲ್ಲಿ ಆಯೋಜನೆಯಾಗಿದ್ದ ಸಾಂಸ್ಕೃತಿಕ ಸ್ಪರ್ಧೆಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು. ವಿದ್ಯಾರ್ಥಿಗಳು ತಮ್ಮ ವ್ಯಾಸಂಗದ ಜೊತೆಗೆ ನೃತ್ಯ, ಸಂಗೀತ, ನಾಟಕ, ಭಾಷಣ, ರಸಪ್ರಶ್ನೆ ಮುಂತಾದ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರೆ ಅವರು ಸರ್ವಾಂಗೀಣ ಅಭಿವೃದ್ಧಿ ಹೊಂದಲು ಸಾಧ್ಯ ಎಂದರು.

**ಪೋಷಕರಿಗೆ ಕರೆ**

ಕಲೆ, ಸಾಹಿತ್ಯ, ಸಂಸ್ಕೃತಿ ಮನುಷ್ಯನ ಬೆಳವಣಿಗೆಗೆ ಸಹಕಾರಿಯಾಗಿವೆ. ಇವುಗಳ ಬಗ್ಗೆ ಅಭಿರುಚಿಯನ್ನು ಪ್ರಾಥಮಿಕ ಹಂತದಿಂದಲೇ ಮೂಡಿಸಬೇಕಾಗಿದೆ. ಮಕ್ಕಳಲ್ಲಿ ಸಹಜವಾಗಿ ವಿವಿಧ ಕಲೆಗಳು ಇದ್ದು, ಅವುಗಳನ್ನು ಗುರುತಿಸಿ ಪ್ರೋತ್ಸಾಹಿಸುವುದು ಅವಶ್ಯಕವಾಗಿದೆ ಎಂದು ಅವರು ಪೋಷಕರಿಗೆ ಕರೆ ನೀಡಿದರು.

ಶ್ರೀರಾಮನ ವೈಭವವನ್ನು ಸಂಭ್ರಮದಿಂದ ಆಚರಿಸಬೇಕೆಂದು ಶಾಸಕರಾದ ಎಚ್.ಎ.ಇಕ್ಬಾಲ್ ಹುಸೇನ್ ಅವರ ಕನಸು. ಇಂದು ಕ್ಷೇತ್ರದ ಎಲ್ಲ ಹೋಬಳಿಗಳು ಮತ್ತು ನಗರ ಭಾಗದಲ್ಲಿ 20ಕ್ಕೂ ಹೆಚ್ಚು ಸ್ಪರ್ಧೆಗಳು ಯಶಸ್ವಿಯಾಗಿ ನಡೆಯುವ ಮೂಲಕ ನನಸಾಗುತ್ತಿವೆ. ಯುವಕ-ಯುವತಿಯರಿಗೆ



ಹಲವು ವೇದಿಕೆ ನೀಡಿ ಅವರಲ್ಲಿರುವ ಪ್ರತಿಭೆಯನ್ನು ಅನಾವರಣಗೊಳಿಸಲು ಅವಕಾಶ ಸಿಕ್ಕಿದೆ. ಈಗಾಗಲೇ ಕ್ರಿಕೆಟ್, ವಾಲಿಬಾಲ್, ಕಬಡ್ಡಿ ಕ್ರೀಡೆಗಳಲ್ಲಿ ಇಲ್ಲಿ ಆಯ್ಕೆಯಾದವರನ್ನು ಕನಕೋತ್ಸವಕ್ಕೆ ಕಳುಹಿಸಿಕೊಡಲಾಗುವುದು ಎಂದ ಅವರು ರಾಮೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮ ಯಶಸ್ವಿಯಾಗಲೆಂದು ಆಶಿಸಿದರು.

ಕಾರ್ಯಕ್ರಮದಲ್ಲಿ ವಿವಿಧ ಶಾಲಾ ಮಕ್ಕಳು ವರ್ಣರಂಜಿತ ಉಡುಗೆ-ತೊಡುಗೆಗಳೊಂದಿಗೆ ಚಲನಚಿತ್ರ ಗೀತೆಗಳು, ದೇಶಭಕ್ತಿ ಗೀತೆಗಳಿಗೆ ನಡೆಸಿಕೊಟ್ಟ ನೃತ್ಯಗಳು ನೋಡುಗರ ಗಮನ ಸೆಳೆದವು.

ಈ ವೇಳೆ ರಾ-ಚ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಸಿ.ಎನ್.ಆರ್ ವೆಂಕಟೇಶ್, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಕೆ.ಸತೀಶ್, ನಗರಸಭೆ ಉಪಾಧ್ಯಕ್ಷೆ ಆಯಿಷಾಬಾನು, ಸ್ಥಾಯಿ ಸಮಿತಿ ಅಧ್ಯಕ್ಷ ಪೈರೋಜ್ ಸದಸ್ಯರಾದ ಬೈರೇಗೌಡ, ಅಸ್ಮದ್, ಅಣ್ಣು, ಸಮದ್, ನಿಜಾಂಮುದ್ದೀನ್ ಷರೀಪ್, ಜಿಲ್ಲಾ ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಗುರುಪ್ರಸಾದ್, ಮಾಯಗಾನಹಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ಎಂ.ಹೆಚ್.ರಂಜಿತ್, ನಗರ ಯುವ ಕಾಂಗ್ರೆಸ್ ಅಧ್ಯಕ್ಷ ಎಂ.ಮುಷೀರ್, ಸಾಂಸ್ಕೃತಿಕ ಸಂಘಟಕರಾದ ರೇಣುಕಾಪ್ರಸಾದ್, ಲಿಂಗರಾಜು, ಮೋಹನ್, ಅರೇಹಳ್ಳಿ ರವಿ ಮತ್ತಿತರರು ಇದ್ದರು.

### ಶಾಲೆಗಳು ಸಂಸ್ಕೃತಿ ಬೆಳೆಸುವ ಕೇಂದ್ರಗಳು

**ಶಾಲೆಗಳು ನಮ್ಮ ಕಲೆ, ಸಂಸ್ಕೃತಿ ಬೆಳೆಸುವ ಕೇಂದ್ರಗಳಾಗಿವೆ. ನಶಿಸಿ ಹೋಗುತ್ತಿರುವ ಕಲೆ, ಸಂಸ್ಕೃತಿ ಉಳಿಸುವ ಜವಾಬ್ದಾರಿ ಶಾಲೆಗಳು ಮತ್ತು ಶಿಕ್ಷಕರುಗಳ ಮೇಲಿದೆ. ಮಕ್ಕಳಲ್ಲಿ ನಾಡು, ನುಡಿ, ರಾಷ್ಟ್ರದ ಬಗ್ಗೆ ಗೌರವ ಭಾವನೆ ಬರಬೇಕಾದರೆ ಶಿಕ್ಷಣದ ಜೊತೆಗೆ ಸಾಂಸ್ಕೃತಿಕ ಪ್ರಜ್ಞೆಯನ್ನು ಬೆಳೆಸಬೇಕು. ಮಕ್ಕಳನ್ನು ಶಿಕ್ಷಣಕ್ಕೆ ಸೀಮಿತಗೊಳಿಸದೆ ನಾಡಿನ ಶ್ರೀಮಂತ ಸಂಸ್ಕೃತಿಯ ಬಗ್ಗೆ ತಿಳುವಳಿಕೆ ಮೂಡಿಸಬೇಕು ಎಂದರು.**

ಮೊದಲ ಪುಟದಿಂದ

## ನಿಲ್ಲದ ಭ್ರೂಣ ಹತ್ಯೆ

ರಾಜ್ಯದ ಕೆಲವು ಜಿಲ್ಲೆಗಳ ಆಸ್ಪತ್ರೆಗಳಲ್ಲಿ ಹೆಚ್ಚಿನ ಸಂಖ್ಯೆಯ ಗಂಡು ಮಕ್ಕಳ ಜನನ ದಾಖಲಾಗುತ್ತಿವೆ ಎಂಬುದು ಗುಪ್ತಚರ ಮಾಹಿತಿ ಮೂಲಕ ತಿಳಿದಿದೆ. ಯಾವ ತಾಲ್ಲೂಕಿನಲ್ಲಿ ಪುರುಷ-ಮಹಿಳೆಯರ ಅನುಪಾತ ಹದಗೆಡುತ್ತಿದೆ, ಯಾವ ಆಸ್ಪತ್ರೆಯಲ್ಲಿ ಏನಾಗುತ್ತಿದೆ ಎಂಬ ಮಾಹಿತಿ ಕಲೆಹಾಕಿ ಸೂಕ್ತ ಪರಿಶೀಲನೆ ನಡೆಸಿ ಇಂತಹ ಜಾಲಕ್ಕೆ ಕಡಿವಾಣ ಹಾಕಲು ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಸಚಿವರು ತಿಳಿಸಿದರು.

ಹೆಣ್ಣು ಭ್ರೂಣ ಹತ್ಯೆಗೆ ಸಂಬಂಧಿಸಿ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾದವರನ್ನು ಗುರುತಿಸಲು ಕಳೆದ ಎರಡು ವರ್ಷಗಳಲ್ಲಿ ಏಳು ಕಡೆ ಡೆಕಾಯ್ ಆಪರೇಷನ್ ಮಾಡಲಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಮತ್ತು ಆಸ್ಪತ್ರೆಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ. ಆದ್ಯತೆಯ ಮೇಲೆ ಹೆಚ್ಚಿನ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಎಂದು ಅವರು ಹೇಳಿದರು.

ಯಾವುದೇ ಕಟ್ಟುನಿಟ್ಟಿನ ಕಾನೂನನ್ನು ತರಲಾಗುತ್ತಿದೆಯೇ ಎಂಬ ರವಿ ಅವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವರು, ಸರ್ಕಾರವು ಕಾನೂನನ್ನು ಬಲಪಡಿಸುವ ಮತ್ತು ಇದನ್ನು ನಿಯಂತ್ರಿಸಲು ಕಟ್ಟುನಿಟ್ಟಾಗಿ ಮಾಡುವ ಬಗ್ಗೆ ಪರಿಗಣಿಸುತ್ತದೆ ಎಂದರು. ಕಳೆದ ಎರಡು ವರ್ಷಗಳಲ್ಲಿ ಅಸ್ತಿತ್ವದಲ್ಲಿರುವ ಕಾನೂನುಗಳಿಗೆ ಕೆಲವು ತಿದ್ದುಪಡಿಗಳನ್ನು ಮಾಡಲಾಗಿದೆ. ಸುಧಾರಿತ ತಂತ್ರಜ್ಞಾನ ಮತ್ತು ಅಂತರ್ಜಾಲವನ್ನು ಇಂತಹ ವಿಚಾರಗಳನ್ನು ಕೈಗೊಳ್ಳಲು ಬಳಸಲಾಗುತ್ತಿದೆ. ಗರ್ಭಪಾತಕ್ಕೆ ಮೌಖಿಕ ಔಷಧಿಗಳು ಕೌಂಟರ್‌ನಲ್ಲಿ ಲಭ್ಯವಿದೆ. ಅವುಗಳ ನಿಯಂತ್ರಣಕ್ಕೆ ಕಾನೂನು ತರಲು ನಾವು ಪರಿಶೀಲಿಸಬೇಕಾಗಿದೆ. ಅಂತಹ ಔಷಧಿಗಳ ಮಾರಾಟವನ್ನು ದಾಖಲಿಸಬೇಕು ಎಂದು ಆಹಾರ ಮತ್ತು ಔಷಧಿ ಆಡಳಿತವು ಫಾರ್ಮಾಸಿಸ್ಟ್‌ಗಳಿಗೆ ಸೂಚನೆಗಳನ್ನು ನೀಡಿದೆ. ಗರ್ಭಧಾರಣೆ ಪೂರ್ವ ಮತ್ತು ಪ್ರಸವ ಪೂರ್ವ ರೋಗನಿರ್ಣಯ ತಂತ್ರಗಳ (ಪಿಸಿ ಮತ್ತು ಪಿಎನ್‌ಡಿಟಿ) ಕಾಯ್ದೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಹೆಣ್ಣು ಭ್ರೂಣಗಳನ್ನು ಗುರುತಿಸುವುದು ಮತ್ತು ಜಾಗೃತಿ ಮೂಡಿಸಲಾಗುತ್ತಿದೆ ಎಂದು ಹೇಳಿದರು.

# ಮಕ್ಕಳಿಗೆ ಪುಸ್ತಕದ ಜತೆಗೆ ನಾಟಕ ಕಲಿಸಿ: ರಂಗಕರ್ಮಿ ಪ್ರಸನ್ನ

ಮೈಸೂರು: ಮಕ್ಕಳಿಗೆ ಶಾಲೆಯಲ್ಲಿ ಪುಸ್ತಕದ ಹೊರೆಯನ್ನು ಇಳಿಸಿ ಅವರ ಕಲಿಕೆಯನ್ನು ನಲಿಕೆಯನ್ನಾಗಿ ಮಾಡಲಿಕ್ಕೆ ನಾಟಕವನ್ನು ಬಳಸಿಕೊಳ್ಳಬೇಕು ಎಂದು ಹಿರಿಯ ರಂಗಕರ್ಮಿ ಪ್ರಸನ್ನ ಹೇಳಿದರು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಹಾರ್ಡ್ವಿಕ್ ಶಾಲಾ ಆವರಣದ ರಂಗಭೂಮಿ ಮಂದಿರದಲ್ಲಿ ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆವತಿಯಿಂದ ಆಯೋಜಿಸಲಾಗುತ್ತಿರುವ ರಾಷ್ಟ್ರೀಯ ಗೊಂಬೆಯಾಟ ಉತ್ಸವದ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಶಿಕ್ಷಣ ಕ್ಷೇತ್ರಕ್ಕೆ ಒದಗಿರುವ ಹಾಗೂ ಮುಖ್ಯವಾದ ಸಾಂಸ್ಕೃತಿಕ ಪರಿಕರ ಬೊಂಬೆಗಳು. ಮಕ್ಕಳಿಗಾಗಿ ಕಥೆ ಹೇಳುವಾಗ, ನಾಟಕ ಮಾಡುವಾಗ ಈ ಪರಿಕರಗಳನ್ನು ಬಳಸಿ ಬಹಳ ಯಶಸ್ವಿಯಾಗಿ ಬಳಸಿ ರಂಜಿಸಬಲ್ಲ ನಾಟಕಗಳಿವು. ಮಕ್ಕಳ ಶಿಕ್ಷಣಕ್ಕಾಗಿ ಮಾಡಲಾಗುತ್ತಿರುವ ಬೊಂಬೆಯಾಟವಾಗಿದೆ. ನಾಟಕದಲ್ಲಿ ಬೊಂಬೆಯಾಟದಂತಹ ಪರಿಕರಗಳನ್ನು ಬಳಸಿಕೊಂಡರೆ ಮಕ್ಕಳು ಸಂತೋಷ ಪಟ್ಟು, ಕುಣಿಯುತ್ತದೆ. ಇದರಿಂದ ಮಕ್ಕಳಿಗೆ ಏನೇ ಕಲಿಸಿದರೂ ಅದು ಕಲಿಯುತ್ತದೆ ಎಂದರು.

ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆಯ ನಿರ್ದೇಶಕ ಚೆಲುವರಾಜು ಮಾತನಾಡಿ, ಡಿ.16ರಿಂದ 20ರವರೆಗೆ ರಾಷ್ಟ್ರೀಯ ಗೊಂಬೆಯಾಟ ಉತ್ಸವ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ. ಸಂಪನ್ಮೂಲ ವ್ಯಕ್ತಿಗಳಾಗಿ ಬಂದಿರುವ ಪಪೆಟ್ ವಿನ್ಯಾಸಕರೂ ಆದ ಶಶಿಧರ ಅಡಪ ಅವರು ಕಾರ್ಯಗಾರದ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕೇರಳ, ತಮಿಳುನಾಡು, ಆಂದ್ರಪ್ರದೇಶ ಸೇರಿದಂತೆ



ಕಲಿಯಲು ಆಸಕ್ತಿ ಇರುವ ಸ್ಥಳೀಯರು ಸೇರಿ 10ರಿಂದ 15 ಜನ ಕಾರ್ಯಾಗಾರದಲ್ಲಿ ಭಾಗವಹಿಸಿ ಅಭ್ಯಾಸ ಮಾಡುತ್ತಿದ್ದಾರೆ. ಕಾರ್ಯಾಗಾರಕ್ಕೆ ಭಾಗವಹಿಸುವವರಿಗೆ ಎಂಟ್ರಿಫೀಸ್‌ಗಾಗಿ 3000 ರೂ ಹಣವನ್ನುನಿಗದಿ ಮಾಡಲಾಗಿತ್ತು. ಅವರಿಗೆ ಬೇಕಾದ ಸಲಕರಣೆಗಳನ್ನು ನೀಡುವುದರ ಜತೆಗೆ ಊಟ, ತಿಂಡಿಯ ವ್ಯವಸ್ಥೆಗಳನ್ನು ಸಹ ಮಾಡಲಾಗಿದೆ ಎಂದು ಹೇಳಿದರು. ಡಿ.19ರಿಂದ 21ರವರೆಗೆ ಸಾರ್ವಜನಿಕರಿಗಾಗಿ ಶೋ ಗಳನ್ನು ಏರ್ಪಡಿಸಲಾಗಿದೆ. ಇದಕ್ಕಾಗಿ 6 ಬೇರೆ ಬೇರೆ ತಂಡಗಳು ಭಾಗಿಯಾಗಲಿವೆ. ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ನೋಡಬೇಕೆಂಬ ಉದ್ದೇಶದಿಂದ 7 ರಿಂದ 8 ಶಾಲೆಗಳ ಜತೆ ಒಡಂಬಡಿಕೆಯನ್ನು ಮಾಡಿಕೊಳ್ಳಲಾಗಿದೆ. ಆಯಾಯ ಶಾಲೆಗಳಿಗೆ ಹೋಗಿ ಮಕ್ಕಳ ಮುಂದೆ ನಾಟಕವನ್ನು ಪ್ರದರ್ಶಿಸಿ ಸಂಜೆ ಇಲ್ಲಿ ಪ್ರದರ್ಶನ ಮಾಡಲಿದ್ದಾರೆ. ಈಗ ಬೊಂಬೆಯಾಟ ಪ್ರದರ್ಶನಗೊಳ್ಳಲಿರುವ ಶಾಲೆಗಳಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದ್ದು, ಮುಂದಿನ ದಿನಗಳಲ್ಲಿ ಬೇರೆ ಬೇರೆ ಶಾಲೆಗಳಿಗೂ ವಿಸ್ತರಿಸಲಾಗುವುದು. ಇಲ್ಲಿ (ಹಾರ್ಡ್ವಿಕ್ ಶಾಲಾ ಆವರಣ) ಬಂದು ನಾಟಕ ನೋಡುವವರಿಗೆ ಎಂಟ್ರಿ ಫೀಸ್ ಅನ್ನು 100 ರೂ. ನಿಗದಿ ಪಡಿಸಲಾಗಿದೆ. ಸಂಜೆ 6 ಗಂಟೆಯಿಂದ ಗೊಂಬೆಯಾಟ ನಡೆಯಲಿದ್ದು, ಪ್ರತಿದಿನ 2 ಶೋಗಳು ನಡೆಯಲಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಪಪೆಟ್ ವಿನ್ಯಾಸಕರು ಮತ್ತು ನಿರ್ಮಾಣ ವಿನ್ಯಾಸಕರೂ ಆದ ಶಶಿಧರ ಅಡಪ, ಹಿರಿಯ ರಂಗ ನಿರ್ದೇಶಕರಾದ ರಾಮೇಶ್ವರಿ ವರ್ಮಾ ಇತರರು ಹಾಜರಿದ್ದರು.

**ನಮಗೆ ಸರ್ಕಾರದಿಂದ ಯಾವುದೇ ದುಡ್ಡು ಬಂದಿಲ್ಲ. ಕೇವಲ ಪ್ರೋತ್ಸಾಹದ ಹಣದಿಂದ ಇಂತಹ ಕಲೆಯನ್ನು ಬೆಳೆಸುತ್ತಿದ್ದೇವೆ. ಸರ್ಕಾರದ ನಾಯಕರಿಗೆ ಇವೆಲ್ಲ ಭಾಷಣದಲ್ಲಿ ಮಾತ್ರ ಬೇಕು. ಹೊಸ ಶಿಕ್ಷಣ ನೀತಿಯಲ್ಲಿ ರಂಗ ಶಿಕ್ಷಣವನ್ನು ಬಳಸಿ ಎಂದು ಕಾನೂನು ಮಾಡಲಾಗಿದೆ. ರಂಗಶಿಕ್ಷಣವನ್ನು ಬಿ.ಎಡ್‌ನಲ್ಲಿ ಕಡ್ಡಾಯ ವಿಷಯವನ್ನಾಗಿ ಸೇರಿಸಲಾಗಿದೆ.**

▸▸ **ಪ್ರಸನ್ನ** ಹಿರಿಯ ರಂಗಕರ್ಮಿ

ಹುಟ್ಟುಹಬ್ಬದ ವಿಶೇಷ

# ಚಾಮುಂಡೇಶ್ವರಿ ದರ್ಶನ ಪಡೆದ ಎಚ್.ಡಿ.ಕುಮಾರಸ್ವಾಮಿ

ಮೈಸೂರು: ಜೆಡಿಎಸ್ ರಾಜ್ಯಾಧ್ಯಕ್ಷರೂ ಆದ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ತಮ್ಮ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಮಂಗಳವಾರ ಶ್ರೀ ಚಾಮುಂಡೇಶ್ವರಿ ದರ್ಶನ ಪಡೆದರು.

ಬೆಂಗಳೂರಿನಿಂದ ರಸ್ತೆ ಮಾರ್ಗವಾಗಿ ನಗರಕ್ಕೆ ಆಗಮಿಸಿದ ಅವರನ್ನು ಹೊರವಲಯದ ಪಯಣ ಮ್ಯೂಸಿಯಂ ಸಮೀಪ ಬೆಂಬಲಿಗರು ಅದ್ದೂರಿಯಾಗಿ ಸ್ವಾಗತಿಸಿದರು. ಬಳಿಕ ಚಾಮುಂಡಿಬೆಟ್ಟಕ್ಕೆ ತೆರಳಿದ ಕುಮಾರಸ್ವಾಮಿ ಅವರು ಪ್ರತಿ ವರ್ಷದಂತೆ ಹುಟ್ಟುಹಬ್ಬದಂದು ಅಮ್ಮನವರ ದರ್ಶನ ಪಡೆದು ಪ್ರಾರ್ಥನೆ ಸಲ್ಲಿಸಿದರು.

ಸರ್ಕಾರಿ ಅತಿಥಿಗೃಹದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು. ನವದೆಹಲಿಯಿಂದ ರಾಷ್ಟ್ರಪತಿಗಳ ಜತೆಯಲ್ಲೇ ಬರಬೇಕಾಗಿತ್ತು. ಬೆಂಗಳೂರಿನಿಂದ ಮೈಸೂರಿನವರೆಗೂ ನನ್ನ ಅಭಿಮಾನಿಗಳಿದ್ದಾರೆ. ಹುಟ್ಟುಹಬ್ಬದ ಸಂದರ್ಭದಲ್ಲಿ ನಿರಾಸೆ ಮಾಡಬಾರದು ಎನ್ನುವ ಕಾರಣಕ್ಕೆ



ಕಾರ್ಯಕರ್ತರನ್ನು ಭೇಟಿ ಮಾಡಿದ್ದೇನೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ 2800 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸರ್ಕಾರ 32ಲಕ್ಷ ರೈತರಿಗೆ 24 ಸಾವಿರ ಕೋಟಿ ರೂ. ಹಣ ನೀಡುತ್ತೇವೆ ಎಂದು ಹೇಳಿತ್ತು. ಆದರೆ ರೈತರನ್ನು ಆತ್ಮಹತ್ಯೆಯ ಪರಿಸ್ಥಿತಿಗೆ ತಂದು ನಿಲ್ಲಿಸಿದೆ. ವೈಫಲ್ಯ ಹಾಗೂ ಭ್ರಷ್ಟಾಚಾರದಿಂದ ಕೂಡಿದೆ. ಸರ್ಕಾರದ ಬಗ್ಗೆ ಮುಂದೆ ಮಾತನಾಡುತ್ತೇನೆ. ದ್ವೇಷ ಭಾಷಣ ಮಸೂದೆ ಜಾರಿಗೊಳಿಸುವ ಮೂಲಕ ಪ್ರತಿಪಕ್ಷಗಳನ್ನು ಹತ್ತಿಕ್ಕುವ ಕೆಲಸಕ್ಕೆ ಮುಂದಾಗಿದೆ. ಇದಕ್ಕೆ ವಿರೋಧ ಪಕ್ಷಗಳು ಹೆದರುವುದಿಲ್ಲ. ಪ್ರಧಾನಿಗಳ ಬಗ್ಗೆ ಕಾಂಗ್ರೆಸ್ ಕಾರ್ಯಕರ್ತರು ಏನೇನು ಮಾತನಾಡಿದ್ದಾರೆ. ಅವರ ಮೇಲೆ ಯಾವ ರೀತಿ ಕ್ರಮ ತೆಗೆದುಕೊಳ್ಳುತ್ತಾರೆ ನೋಡೋಣ ಎಂದು ಮಾರ್ಮಿಕವಾಗಿ ನುಡಿದರು.

ಇದೇ ಸಂದರ್ಭದಲ್ಲಿ ವಿಕಲಚೇತನ ವಿದ್ಯಾರ್ಥಿಗಳಿಗೆ ಅಗತ್ಯ ಪರಿಕರಗಳನ್ನು ವಿತರಣೆ ಮಾಡಲಾಯಿತು. ಮಾಜಿ ಸಚಿವ ಸಾ.ರಾ.ಮಹೇಶ್, ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ, ವಿಧಾನ ಪರಿಷತ್ತು ಸದಸ್ಯರಾದ ಕೆ.ವಿವೇಕಾನಂದ, ಸಿ.ಎನ್. ಮಂಜೇಗೌಡ, ಮಾಜಿ ಸಂಸದ ಪ್ರತಾಪ್ ಸಿಂಹ, ಮಾಜಿ ಶಾಸಕರಾದ ಎಲ್.ನಾಗೇಂದ್ರ, ಎಂ.ಅಶ್ವಿನ್ ಕುಮಾರ್, ಮಹದೇವು, ಮಾಜಿ ಮೇಯರ್‌ಗಳಾದ ಆರ್.ಲಿಂಗಪ್ಪ, ರವಿಕುಮಾರ್(ಚಿನ್ನಿ ರವಿ), ಜೆಡಿಎಸ್ ಉಪಾಧ್ಯಕ್ಷ ಸುಧಾಕರ ಎಸ್.ಶೆಟ್ಟಿ, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ದ್ವಾರಕೀಶ್, ಮಹಾನಗರ ಪಾಲಿಕೆ ಮಾಜಿ ಸದಸ್ಯರಾದ ಎಸ್.ಬಿ.ಎಂ.ಮಂಜು, ಕೆ.ವಿ.ಶ್ರೀಧರ್, ಅಶ್ವಿನಿ ಅನಂತು, ಶೋಭಾ, ಪ್ರೇಮಾ ಶಂಕರೇಗೌಡ, ಮುಖಂಡರಾದ ಸೋಮು, ದೇವರಾಜು, ನಿಶಾಂತ್ ದಾಸೇಗೌಡ, ದಿನೇಶ್ ಕುಮಾರ್ ಮುಂತಾದವರು ಪಾಲ್ಗೊಂಡಿದ್ದರು.

# ಆರ್‌ಆರ್ ಜಯಭೇರಿ: ವಿಜಯೋತ್ಸವ



ಚಾಮರಾಜನಗರ, ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ 2025–30ನೇ ಸಾಲಿನ ಕೇಂದ್ರ ಸಮಿತಿ ಪಂಚವಾರ್ಷಿಕ ಚುನಾವಣೆಯಲ್ಲಿ ಸಿ.ರಮೇಶ್ ಅವರ ನೇತೃತ್ವದ ಆರ್ ಆರ್ ತಂಡ ಅಭೂತಪೂರ್ವ ಗೆಲುವು ಸಾಧಿಸಿದ ಹಿನ್ನಲೆಯಲ್ಲಿ ಚಾಮರಾಜನಗರ ಜಿಲ್ಲಾ ಸಮಿತಿ ವತಿಯಿಂದ ನಗರದ ಉಪ ವಿಭಾಗೀಯ ಕಚೇರಿ ಮುಂಭಾಗದಲ್ಲಿ ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಾಚರಣೆ ಮಾಡಲಾಯಿತು.

ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯರಾಗಿ 2 ಬಾರಿಗೆ ಗೆಲುವು ಸಾಧಿಸಿರುವ ಮಹಮ್ಮದ್ ತಸ್ಕೀನ್ ಹಾಗೂ ಜಿಲ್ಲಾಧ್ಯಕ್ಷ ಜಿ.ಎಂ.ಸುರೇಶ್ ಮಾತನಾಡಿ, ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ 2025–30ನೇ ಸಾಲಿನ ಕೇಂದ್ರ ಸಮಿತಿ ಪಂಚವಾರ್ಷಿಕ ಚುನಾವಣೆಯಲ್ಲಿ ಸಿ.ರಮೇಶ್ ಅವರ ನೇತೃತ್ವದ ಆರ್‌ಆರ್‌ತಂಡ ಅಭೂತಪೂರ್ವ ಗೆಲುವು ಸಾಧಿಸಲು ಕಾರಣಕರ್ತರಾದ ವಿದ್ಯುತ್ ಗುತ್ತಿಗೆದಾರರಿಗೆ ಅಭಿನಂದನೆ ಸಲ್ಲಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷ ಅನ್ಸರ್ ಅಲಿಖಾನ್ , ಜಿಲ್ಲಾ ಪ್ರಧಾನ ಕಾರ್ಯದರ್ಶಿ ಭಾನುಪ್ರಕಾಶ್ ಎಸ್. ಖಜಾಂಚಿ ಎಂ.ಎನ್.ಸಂಪತ್ ಕುಮಾರ್, ಕೊಳ್ಳೇಗಾಲ ತಾಲ್ಲೂಕು ಸಮಿತಿ ಅಧ್ಯಕ್ಷ ಕೆ.ಬಿ.ನಾಗರಾಜು, ಎಸ್ ಸಿ/ಎಸ್ ಟಿ ವಿದ್ಯುತ್ ಗುತ್ತಿಗೆದಾರರ ಸಂಘದ ತಾಲ್ಲೂಕು ಅಧ್ಯಕ್ಷ ನಾಗರಾಜು, ಚಾಮರಾಜನಗರ ತಾಲ್ಲೂಕು ಸಂಘಟನಾ ಕಾರ್ಯದರ್ಶಿ ಸಿದ್ದಾರ್ಥ ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ಶಾಮನೂರು ಶಿವಶಂಕರಪ್ಪನವರ ಕೊಡುಗೆ ಅಪಾರ

▸▸ ಸರ್ಪಭೂಷಣ ಸ್ವಾಮೀಜಿ ಹೇಳಿಕೆ
▸▸ ಚಾ.ನಗರದ ಸಿದ್ದಮಲ್ಲೇಶ್ವರ ಮಠದ ಮುಂಭಾಗ ಶ್ರದ್ಧಾಂಜಲಿ ಸಭೆ



ಚಾಮರಾಜನಗರ: ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರು, ಮಾಜಿ ಸಚಿವರು ಹಾಗೂ ಹಿರಿಯರಾದ ಡಾ. ಶಾಮನೂರು ಶಿವಶಂಕರಪ್ಪ ಅವರು ಸಮಾಜಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದ್ದು, ಮಠ ಮಾನ್ಯಗಳು ಹಾಗೂ ಸಮಾಜದ ಬಗ್ಗೆ ಅಪಾರವಾದ ಪ್ರೀತಿ, ಕಾಳಜಿಯನ್ನು ಹೊಂದಿದ್ದರು ಎಂದು ಹರವೆ ವಿರಕ್ತ ಮಠಾಧ್ಯಕ್ಷರಾದ ಶ್ರೀ ಸರ್ಪ ಭೂಷಣಸ್ವಾಮೀಜಿ ತಿಳಿಸಿದರು.

ನಗರದ ಬಿ.ರಾಚಯ್ಯ ಜೋಡಿ ರಸ್ತೆಯಲ್ಲಿರುವ ಸಿದ್ದಮಲ್ಲೇಶ್ವರ ಮಠದ ಮುಂಭಾಗದಲ್ಲಿ ಶಾಮನೂರು ಶಿವಶಂಕರಪ್ಪ ಅವರ ನಿಧನ ಗೌರ ವಾರ್ಥ ನಡೆದ ಸಂತಾಪ ಸೂಚಕ ಸಭೆಯಲ್ಲಿ ಶಿವಶಂಕರಪ್ಪ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು.

ಬಡತನದ ಕುಟುಂಬದಲ್ಲಿ ಜನಿಸಿದ ಶಿವಶಂಕರಪ್ಪ ವ್ಯಾಪಾರಿ ವೃತ್ತಿಯನ್ನು ಅವಲಂಬಿಸಿ, ಪರಿಶ್ರಮ ಪಟ್ಟು ಸಂಪಾದನೆ ಮಾಡುವ ಜೊತೆಗೆ ಅದರಲ್ಲಿ ಬಂತ ಸಂಪತ್ತನ್ನು ಸಮಾಜಕ್ಕೆ ವಿನಿಯೋಗ ಮಾಡುವ ಕಾಯಕವನ್ನು ನಿರಂತರವಾಗಿ ಮಾಡುತ್ತಾ ಬಂದರು. ಇದರ ಪರಿಣಾಮ ದಾವಣಗೆರೆ ಜಿಲ್ಲೆ ಅಲ್ಲದೇ, ಇತರೇ ಜಿಲ್ಲೆಗಳು ಹಾಗೂ ಕರ್ನಾಟಕವೇ ಅವರ ಸೇವೆಯನ್ನು ಕೊಂಡಾಡಿತು. ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಜೊತೆಗೆ ಮಠ ಮಾನ್ಯಗಳ ಬಗ್ಗೆ ವಿಶೇಷ ಕಾಳಜಿಯನ್ನು ಹೊಂದಿದ್ದರು. ಪಕ್ಷಾತೀತ, ಜಾತ್ಯತೀತ ವ್ಯಕ್ತಿಯಾಗಿದ್ದ ಶಿವಶಂಕರಪ್ಪ ಅವರು ಸಮಾಜದ ವಿಚಾರ ಬಂದಾಗ ಸಂಘಟನೆಯಲ್ಲಿ ಮತ್ತು ಬೆಳವಣ ಗೆಯಲ್ಲಿ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಇಂಥ ಹಿರಿಯ ಜೀವನವನ್ನು ಕಳೆದುಕೊಂಡಿರುವುದು ದುಃಖವಾಗಿದೆ. ಅವರ ಕುಟುಂಬಕ್ಕೆ ದುಃಖವನ್ನು ಭರಿಸುವ ಶಕ್ತಿಯನ್ನು ನೀಡಲಿ ಎಂದು ಆಶಿಸಿದರು.

ಈ ಸಂದರ್ಭದಲ್ಲಿ ಗೋಪಾಲಪುರದ ಶ್ರೀಗಳು, ಮಹಾಸಭಾದ ಜಿಲ್ಲಾಧ್ಯಕ್ಷ ಮೂಡ್ಲುಪುರ ನಂದೀಶ್, ರಾಜ್ಯ ಸಮಿತಿ ಸದಸ್ಯ ಎನ್‌ರಿಚ್ ಮಹದೇವಸ್ವಾಮಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ನರಸಮಂಗಲ ನಿರಂಜನಮೂರ್ತಿ, ನಿರ್ದೇಶಕರಾದ ಯಣಗುಂಬ ರಾಜೇಂದ್ರ, ಲೋಕೇಶ್ ಕೆ.ಆರ್. ರತ್ನಮ್ಮ ಬಸವರಾಜು, ಬಿಸಲವಾಡಿ ಉಮೇಶ್, ಗುರು ಕಾವುದವಾಡಿ, ಜ್ಯೋತಿಗೌಡನಪುರ ದೊರೆಸ್ವಾಮಿ, ಮಹಿಳಾ ಘಟಕದ ಅಧ್ಯಕ್ಷೆ ಶ್ವೇತಾ ಶಶಿಧರ್, ಡಾ. ಬಸವರಾಜೇಂದ್ರ, ಶರಣ ಸಾಹಿತ್ಯ ಪರಿಷತ್ ಪ್ರಧಾನ ಕಾರ್ಯದರ್ಶಿ ಬಿ.ಕೆ. ರವಿಕುಮಾರ್, ಮುಖಂಡರಾದ ಮಹಾಸಭಾದ ನಿರ್ದೇಶಕರಾದ ಯೋಗಪ್ರಕಾಶ್, ಶ್ರೀಕಂಠಮೂರ್ತಿ ಮೊದಲಾದವರು ಹಾಜರಿದ್ದರು.

# ವಿಶ್ವಮಾನವ ದಿನ ಅರ್ಥಪೂರ್ಣವಾಗಿಸಿ

## 29ರಂದು ಆಯೋಜನೆ | ಪೂರ್ವಭಾವಿ ಸಭೆ

ಮೈಸೂರು: ಜಿಲ್ಲಾಡಳಿತದ ವತಿಯಿಂದ ವಿಶ್ವಮಾನವ ದಿನಾಚರಣೆಯನ್ನು ಡಿ.29 ರಂದು ಬೆಳಗ್ಗೆ 11 ಗಂಟೆಗೆ ಕರ್ನಾಟಕದ ಕಲಾಮಂದಿರದ ಆವರಣದಲ್ಲಿರುವ ಕಿರುರಂಗಮಂದಿರದಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ತಿಳಿಸಿದರು.



ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ನಡೆದ "ವಿಶ್ವ ಮಾನವ" ದಿನಾಚರಣೆಯ ಸಂಬಂಧ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು, ನಾಡು ಕಂಡಂತಹ ಮಹಾನ್ ವ್ಯಕ್ತಿಗಳಲ್ಲಿ ಕುವೆಂಪು ಒಬ್ಬರು. ಅಂತಹ ಕವಿ ಮಹಾಶಯರ ಜನ್ಮ ದಿನಾಚರಣೆಯನ್ನು ಆಚರಿಸುವುದು ನಮ್ಮೆಲ್ಲರಿಗೂ ಹೆಮ್ಮೆಯ ವಿಷಯವಾಗಿದ್ದು, ವಿಶ್ವಮಾನವ ಎಂದರೆ ಎಲ್ಲರನ್ನೂ ಒಳಗೊಂಡ, ಮನುಷ್ಯತ್ವದ ಭಾವನೆ. ಆದ್ದರಿಂದ ಸಮಾಜಕ್ಕೆ ನಾವೆಲ್ಲರೂ ಒಂದು ವಿಶ್ವಮಾನವರು ಎಂಬ ಉತ್ತಮ ಸಂದೇಶವನ್ನು ನೀಡಲು ಈ ಆಚರಣೆಯು ಮಾದರಿಯಾಗಲಿದೆ. ಆಗಾಗಿ ನಾವು ಯಾವಾಗಲು ವಿಶ್ವ ಮಾನವರಾಗಿ ಬದುಕಬೇಕು ಎಂಬ ನಿಟ್ಟಿನಲ್ಲಿ ವಿಶ್ವ ಮಾನವ ದಿನಾಚರಣೆಯನ್ನು ಆಚರಿಸಲಾಗುತ್ತಿದೆ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎಂ.ಡಿ ಸುದರ್ಶನ್ ಮಾತನಾಡಿದರು. ಸಭೆಯಲ್ಲಿ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ಕರ್ನಾಟಕ ಕಾವಲು ಪಡೆಯ ಅಧ್ಯಕ್ಷ ಮೋಹನ್ ಕುಮಾರ್ ಗೌಡ, ಕನ್ನಡ ಚಳುವಳಿಗಾರ ಅರವಿಂದ್ ಶರ್ಮಾ, ಕರುನಾಡು ಸರ್ವೋದಯ ಸೇನೆಯ ಅಧ್ಯಕ್ಷ ರವಿಶಂಕರ್ ಸೇರಿ ಇತರರು ಉಪಸ್ಥಿತರಿದ್ದರು.

## ಜ.1ಕ್ಕೆ ಜಕಣಾಚಾರಿ ದಿನಾಚರಣೆ

ಮೈಸೂರು: ಅಮರ ಶಿಲ್ಪಿ ಜಕಣಾಚಾರಿ ಸಂಸ್ಮರಣಾ" ದಿನಾಚರಣೆಯನ್ನು ಜ.1ರಂದು ಬೆಳಗ್ಗೆ 11 ಗಂಟೆಗೆ ಕರ್ನಾಟಕದ ಕಲಾಮಂದಿರದ ಆವರಣದಲ್ಲಿರುವ ಕಿರು ರಂಗಮಂದಿರದಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ತಿಳಿಸಿದರು. ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ನಡೆದ "ವಿಶ್ವಕರ್ಮ ಅಮರ ಶಿಲ್ಪಿ ಜಕಣಾಚಾರಿ ಸಂಸ್ಮರಣಾ" ದಿನಾಚರಣೆಯ ಪೂರ್ವಭಾವಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು, ಅಮರ ಶಿಲ್ಪಿ ಜಕಣಾಚಾರಿ ಅವರು ಒಬ್ಬರು ಮಹಾನ್ ಶಿಲ್ಪಿ ಇಂದು ಅವರ ಶಿಲ್ಪಕಲೆಗಳು ಹಲವಾರು ಶಿಲ್ಪಿಗಳಿಗೆ ಸ್ಫೂರ್ತಿ ಆಗಿವೆ. ಅಂತಹವರ ಸಾಧನೆಗಳನ್ನು ಎಲ್ಲರಿಗೂ ತಿಳಿಸುವುದು ನಮ್ಮೆಲ್ಲರ ಕರ್ತವ್ಯವಾಗಿರುವುದರಿಂದ ವಿಶ್ವಕರ್ಮ ಅಮರ ಶಿಲ್ಪಿ ಜಕಣಾಚಾರಿ ಸಂಸ್ಮರಣೆಯಯ ದಿನಾಚರಣೆಯನ್ನು ಆಚರಿಸಲಾಗುತ್ತಿದೆ ಎಂದು ತಿಳಿಸಿದರು.

# ಗಜಗೌರಿ ಸಾಮೂಹಿಕ ವ್ರತಾಚರಣೆ: ಹೆಸರು ನೋಂದಾಯಿಸಲು ಜ.5 ಕೊನೆ ದಿನ

ರಾಮನಗರ: 2026ರ ಫೆಬ್ರವರಿಯಲ್ಲಿ ನಗರದಲ್ಲಿ ಆಯೋಜಿಸಿರುವ ಗಜಗೌರಿ ವ್ರತ ಸಾಮೂಹಿಕ ಆಚರಣೆಗೆ ಆಸಕ್ತರು ತಮ್ಮ ಹೆಸರುಗಳನ್ನು 2026ರ ಜನವರಿ 5ನೇ ತಾರೀಖಿನೊಳಗೆ ನೋಂದಾಯಿಸಿಕೊಳ್ಳುವಂತೆ ಶ್ರೀ ಸೀತಾರಾಮ ಸೇವಾ ಟ್ರಸ್ಟ್‌ನ ಪ್ರಕಟಣೆ ತಿಳಿಸಿದೆ.

2026ರ ಫೆ.6 ರಿಂದ ಮೂರುದಿನಗಳ ಕಾಲ ಗಜಗೌರಿ ವ್ರತ ಆಯೋಜಿಸಲಾಗಿದೆ. ಶ್ರೀ ಬಲಮುರಿ ದೇವಸ್ಥಾನ ಟ್ರಸ್ಟ್, ಶ್ರೀ ಅಯ್ಯಪ ಸ್ವಾಮಿ ಸೇವಾ ಮಂಡಳಿಗಳ ಸಹಯೋಗದಲ್ಲಿ ಈ ವ್ರತಾಚರಣೆ ನಡೆಯಲಿದೆ. ಆಸ್ತಿಕರು ಯಾರು ಬೇಕಾದರು ಈ ವ್ರತಾಚರಣೆಯಲ್ಲಿ ಭಾಗವಹಿಸಬಹುದು. ದಂಪತಿಗಳು ವ್ರತಾಚರಣೆಯಲ್ಲಿ ತೊಡಗಿಸಿಕೊಂಡರೆ ಶುಭಫಲ ಪ್ರಾಪ್ತಿಯಾಗುತ್ತದೆ. ಲೋಕಕಲ್ಯಾಣಾರ್ಥ ಹಮ್ಮಿಕೊಳ್ಳಲಾಗಿರುವ ಈ ವ್ರತಾಚರಣೆಯಲ್ಲಿ ಪಾಲ್ಗೊಳ್ಳುವ ಎಲ್ಲರು ತಮ್ಮ ಇಷ್ಟಾರ್ಥಗಳನ್ನು ಸಹ ಈಡೇರಿಸಿಕೊಳ್ಳಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ. ವ್ರತಾಚರಣೆಯ ವೇಳೆ ನಡೆಯುವ ಪೂಜಾ ಕೈಂಕರ್ಯಗಳಿಗೆ ರೂ 5555/– (ಐದು ಸಾವಿರದ ಐನೂರ ಐವತ್ತೈದು ರೂ) ಶುಲ್ಕ ನಿಗಧಿಯಾಗಿದೆ. ಆಯೋಜಕ ಸಂಘಟನೆಗಳು ಪೂಜೆಗೆ ಬೇಕಾದ ಎಲ್ಲಾ ಪದಾರ್ಥಗಳನ್ನು ನೀಡುತ್ತಾರೆ. ಪೂಜಾರ್ಕರ್ತರು ತಮ್ಮ ಮನೆಯಿಂದ ಪೂಜಾ ತಟ್ಟೆ ಮತ್ತು ಪೂಜಾ ದ್ರವ್ಯಗಳನ್ನು ಮಾತ್ರ ತರಬೇಕಾಗಿದೆ. ನಿಗಧಿತ ಶುಲ್ಕ ನೀಡಿ ಪೂಜೆಯಲ್ಲಿ ಭಾಗವಹಿಸುವ ಮಹಿಳೆಯರಿಗೆ ಸೀರೆ ಮತ್ತು ಪುರುಷರಿಗೆ ಪಂಚೆ–ಶಲ್ಯವನ್ನು ನೀಡಲಾಗುವುದು. ಗಜಗೌರಿ ವ್ರತಾಚರಣೆಯಲ್ಲಿ 108 ದಂಪತಿಗಳು ಮಾತ್ರ ಭಾಗವಹಿಸಲು ಅವಕಾಶವಿದೆ. ಮೊದಲು ಶುಲ್ಕ ಪಾವತಿಸಿ ಹೆಸರು ನೋಂದಾಯಿಸಿಕೊಳ್ಳುವವರಿಗೆ ಆಧ್ಯತೆ. ಹೆಚ್ಚಿನ ಮಾಹಿತಿಗೆ ಗಣೇಶ್ ಭಟ್ (9448563485), ಕೆ.ವಿ.ಉಮೇಶ್ (9242108418), ಪಿ.ಶಿವಾನಂದ (9741913420), ಆರ್.ಜೆ.ಕುಮಾರಸ್ವಾಮಿ (9980671006) ಇವರನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

# ಶಾಮನೂರು ಶಿವಶಂಕರಪ್ಪ ನಿಧನಕ್ಕೆ ಶ್ರದ್ಧಾಂಜಲಿ



ಕೆ.ಆರ್.ಪೇಟೆ: ಪಟ್ಟಣದ ಪ್ರವಾಸಿ ಮಂದಿರದಲ್ಲಿ ತಾಲ್ಲೂಕು ವೀರಶೈವ–ಲಿಂಗಾಯಿತ ಮಹಾಸಭಾ ಘಟಕದ ವತಿಯಿಂದ ಭಾನುವಾರ ರಾತ್ರಿ ನಿಧನರಾದ ದಾವಣಗೆರೆ ಶಾಸಕರಾದ ಶಾಮನೂರು ಶಿವಶಂಕರಪ್ಪ ಅವರಿಗೆ ಶ್ರದ್ಧಾಂಜಲಿ ಸಭೆ ನಡೆಸಿ ಗೌರವ ಸಲ್ಲಿಸಲಾಯಿತು.

ದಾವಣಗೆರೆ ಜಿಲ್ಲೆಯ ಸಮಗ್ರ ಅಭಿವೃದ್ಧಿ ಕಳೆದ ಆರು ದಶಕಗಳಿಂದ ತೊಡಗಿಸಿಕೊಂಡಿದ್ದ ಶ್ಯಾಮನೂರು ಶಿವಶಂಕರಪ್ಪ ಅವರು ವೀರಶೈವ ಬೇರೆಯಲ್ಲ ಲಿಂಗಾಯಿತಿ ಬೇರೆಯಲ್ಲ ಎಂಬ ಧ್ಯೇಯದೊಂದಿಗೆ ಲಿಂಗಾಯಿತ ಒಳಪಂಗಡಗಳನ್ನು ಒಗ್ಗೂಡಿಸುವ ಕೆಲಸ ಮಾಡುವಲ್ಲಿ ಯಶಸ್ವಿಯಾಗಿದ್ದರು. ಎಂದು ಮುಖಂಡರು ಅಭಿಪ್ರಾಯಪಟ್ಟರು. ತಾಲ್ಲೂಕು ವೀರಶೈವ ಮಹಾಸಭಾ ಮಾಜಿ ಅಧ್ಯಕ್ಷರಾದ ತೋಟಪ್ಪಶೆಟ್ಟಿ, ಸಾಸಲು ಈರಪ್ಪ, ಬ್ಯಾಂಕ್ ಪರಮೇಶ್, ಸಮಾಜ ಸೇವಕ ಆರ್.ಟಿ.ಓ ಮಲ್ಲಿಕಾರ್ಜುನ್, ಡಿಸಿಸಿ ಬ್ಯಾಂಕ್ ನಿರ್ದೇಶಕ ಎಸ್.ಅಂಬರೀಶ್, ತಾಲ್ಲೂಕು ವೀರಶೈವ ಮಹಾಸಭಾ ಮುಖಂಡರಾದ ಬ್ಯಾಂಕ್ ಪರಮೇಶ್ವರ್, ಮಹಾಸಭಾ ಉಪಾಧ್ಯಕ್ಷ ಎಂ.ಪಿ.ಪ್ರಕಾಶ್, ಎಸ್.ಇ.ಚನ್ನರಾಜು, ಕಾರ್ಯದರ್ಶಿ ಚೋಕನಹಳ್ಳಿ ಪ್ರಕಾಶ್, ವಕೀಲರಾದ ಪುರ ಪಿ.ಬಿ.ಮಂಜುನಾಥ್, ಪ್ರತಾಪ್, ಅಪ್ಪಾಜಿ, ನವೀನ್, ಶಿವಪ್ಪ, ಕುಮಾರ್, ರಾಕೇಶ್, ವಸಂತಪ್ಪ, ಕೇಬಲ್ ಕುಮಾರ್, ದಲಿತ ಮುಖಂಡರಾದ ಚೌಡೇನಹಳ್ಳಿ ದೇವರಾಜು, ಎನ್.ಜೆ.ಮಂಜು ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದು ಸಂತಾಪ ಸೂಚಿಸಿದರು.

## ಮಕ್ಕಳ ವಾಕ್ ಮತ್ತು ಶ್ರವಣ ಸಮಸ್ಯೆ ಪರಿಹರಿಸುವ

# ಪ್ರಯಾಸ್ ಯೋಜನೆ ರಾಜ್ಯದಲ್ಲೇ ಮಾದರಿ: ಜಿಲ್ಲಾಧಿಕಾರಿ ಶಿಲ್ಪಾ ನಾಗ್



ಚಾಮರಾಜನಗರ, ಮಕ್ಕಳ ವಾಕ್ ಮತ್ತು ಶ್ರವಣ ಸಮಸ್ಯೆಗಳನ್ನು ಗುರುತಿಸಿ ಪರಿಹಾರ ಚಿಕಿತ್ಸೆ ಒದಗಿಸುವ ಸಲುವಾಗಿ ವಿಶೇಷವಾಗಿ ಚಾಮರಾಜನಗರ ಜಿಲ್ಲೆಯಲ್ಲೇ ರೂಪಿತವಾಗಿರುವ ಪ್ರಯಾಸ್ ಕಾರ್ಯಕ್ರಮವು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿದ್ದು, ರಾಜ್ಯಮಟ್ಟದಲ್ಲಿ ಮಾದರಿ ಕಾರ್ಯಕ್ರಮವಾಗಿ ಮೆಚ್ಚುಗೆ ಪಡೆದಿದೆ ಎಂದು ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಹೇಳಿದರು.

ತಾಲೂಕಿನ ಸಂತೇಮರಹಳ್ಳಿಯ ಸಮುದಾಯ ಆರೋಗ್ಯ ಕೇಂದ್ರದ ಸಭಾಂಗಣದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ಸಹಯೋಗದಲ್ಲಿ ಅಂಗನವಾಡಿ ಮಕ್ಕಳ ವಾಕ್ ಮತ್ತ ಶ್ರವಣ ದ್ವಿತೀಯ ಹಂತದ ತಪಾಸಣಾ ಹಾಗೂ ಪ್ರಯಾಸ್ ಕಾರ್ಯಕ್ರಮಕ್ಕೆ ನೆರವು ನೀಡುತ್ತಿರುವ ಸಂಸ್ಥೆಗಳಿಗೆ ಕೃತಜ್ಞತೆ ಗೌರವ ಸಲ್ಲಿಸುವ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು.

ಮಾತು ಬಾರದ ಮತ್ತು ಕಿವಿ ಕೇಳದಿರುವ ಸಮಸ್ಯೆಗಳು ತಡವಾಗಿ ಪತ್ತೆಯಾದರೆ ಮಕ್ಕಳ ಶೈಕ್ಷಣಿಕ ಕಾರ್ಯಕ್ಷಮತೆ ಕ್ಷೀಣಿಸುತ್ತದೆ. ಈ ಸಮಸ್ಯೆಗೆ ಆರಂಭದಲ್ಲಿಯೇ ಗುರುತಿಸಿ ಚಿಕಿತ್ಸೆ ನೀಡದೇ ಹೋದರೆ ಮುಂದೆ ಅನೇಕ ಸವಾಲುಗಳು ಎದುರಾಗುತ್ತದೆ. ಈ ಹಿನ್ನೆಲೆಯಲ್ಲಿ ತಪಾಸಣೆ, ವೈದ್ಯಕೀಯ ಚಿಕಿತ್ಸೆ, ಅಗತ್ಯವಿರುವ ಶ್ರವಣ ಸಾಧನಗಳನ್ನು ಒದಗಿಸುವ ಪ್ರಯಾಸ್ ಕಾರ್ಯಕ್ರಮವನ್ನು ಸಂಪೂರ್ಣವಾಗಿ ಸಿಎಸ್‌ಆರ್ ಆರ್ಥಿಕ ನೆರವಿನಿಂದ ಮಾಡಲಾಗುತ್ತಿದೆ ಎಂದರು.

ಜಿಲ್ಲೆಯಲ್ಲಿ 6 ವರ್ಷದೊಳಗಿನ ಎಲ್ಲ ಮಕ್ಕಳಿಗೆ ಆರಂಭದಲ್ಲಿಯೇ ವಾಕ್ ಮತ್ತು ಶ್ರವಣ ತಪಾಸಣೆ ಕೈಗೊಳ್ಳಲಾಗಿದೆ. ಜಿಲ್ಲೆಯ ಅಂಗನವಾಡಿ ವ್ಯಾಪ್ತಿಯಲ್ಲಿ 6 ತಿಂಗಳಿಂದ 6 ವರ್ಷದೊಳಗಿನ 34935 ಮಕ್ಕಳನ್ನು ಗುರುತಿಸಿ ಪ್ರಾಥಮಿಕ ತಪಾಸಣೆಯಿಂದ 11824 ಮಕ್ಕಳನ್ನು ಸಾಂಭವ್ಯ ಮಾತು ಮತ್ತು ಶ್ರವಣ ಸಮಸ್ಯೆ ಇರಬಹುದೆಂದು ಗುರುತಿಸಲಾಗಿದೆ. ದ್ವಿತೀಯ ಹಂತದ ಪರೀಕ್ಷೆ ಗುಂಡ್ಲುಪೇಟೆ ತಾಲೂಕಿನಲ್ಲಿ ನಡೆಸಲಾಗಿದ್ದು, ಚಾಮರಾಜನಗರ ತಾಲೂಕಿನಲ್ಲಿಯೂ ಮುಂದುವರೆದಿದೆ. ಚಾಮರಾಜನಗರ ಜಿಲ್ಲೆಯಲ್ಲಿ ಆರಂಭವಾಗಿರುವ ಪ್ರಯಾಸ್ ಕಾರ್ಯಕ್ರಮ ಇತರೆ ಜಿಲ್ಲೆಗಳಿಗೂ ಮಾದರಿ ಯಾಗುವಂ ತಿದ್ದು, ರಾಜ್ಯಮಟ್ಟದಲ್ಲಿ ಮೆಚ್ಚುಗೆ ಪಡೆದಿದೆ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್. ಚಿದಂಬರ, ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ಪ್ರೊ. ಡಾ. ಎಂ. ಸಂದೀಪ್, ಡಾ ಪ್ರೀತ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರಾದ ಮಂಜುನಾಥ, ಕಾರ್ಯಕ್ರಮ ಸಂಯೋಜಕರಾದ ಶಿವಸ್ವಾಮಿ, ಸಿಎಸ್‌ಆರ್ ಸಮಾಲೋಚಕರದ ರಕ್ಷಿತಾ, ಇತರರು ಉಪಸ್ಥಿತರಿದ್ದರು.



**ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹುಟ್ಟುಹಬ್ಬದ ಅಂಗವಾಗಿ ನಗರದ ಪಡುವಾರಹಳ್ಳಿಯ ಉದ್ಯಾನವನದಲ್ಲಿ ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ಅಧ್ಯಕ್ಷ ಎಂ.ಭೈರಪ್ಪ ಸಸಿ ನೆಟ್ಟು ಪರಿಸರ ಕಾಳಜಿಯಿಂದ ತೋರಿದರು. ಈ ಸಂಧರ್ಭದಲ್ಲಿ ಮುಖಂಡರಾದ ರಾಮಣ್ಣ, ನಗರಪಾಲಿಕೆ ಮಾಜಿ ಸದಸ್ಯ ಎಂ.ಚಿಕ್ಕವೆಂಕಟ, ನಗರ ಬಿಜೆಪಿ ಎಸ್ ಟಿ ಮೋರ್ಚಾ ಅಧ್ಯಕ್ಷ ಪಡುವಾರಹಳ್ಳಿ ಎಂ.ರಾಮಕೃಷ್ಣ, ಎನ್.ಯೋಗಾನಂದ್,ಜನಹಿತ ಸೊಸೈಟಿ ನಿರ್ದೇಶಕರಾದ ಎಸ್.ಕೃಷ್ಣಕುಮಾರ್, ರಾಘವ್ ಎಂ.ಗೌಡ, ಸಿ.ಸಂತೋಷ್, ಕೇಬಲ್ ಕಿಟ್ಟಿ, ಲಾರಿ ರವಿ, ಛಾಯಾ ಪ್ರಸಾದ್ ಗೋವಿಂದಣ್ಣ, ಕೆ.ಗಿರೀಶ್ ಇದ್ದರು.**

# ವಿಜೃಂಭಣೆಯ ಬಸವೇಶ್ವರ ಉತ್ಸವ



ಗುಂಡ್ಲುಪೇಟೆ. ತಾಲೂಕಿನ ಕಮರಹಳ್ಳಿ ಗ್ರಾಮದಲ್ಲಿ ಬಸವೇಶ್ವರ ದೇವಸ್ಥಾನದ ಕಳಸಾರೋಹಣ ಕಾರ್ಯಕ್ರಮ ಯಶಸ್ವಿಯಾಗಿ ಜರುಗಿತು. ಧಾರ್ಮಿಕ ವಿಧಿವಿಧಾನಗಳೊಂದಿಗೆ ಮೆರವಣಿಗೆ ನಡೆಯಿತು. ಗ್ರಾಮದ ಪ್ರಮುಖ ಬೀದಿ ಗಳಲ್ಲಿ ವೀರಗಾಸೆ ಡೊಳ್ಳು ಹಾಗೂ 15ಕ್ಕೂ ಹೆಚ್ಚು ನಂದಿ ಧ್ವಜದೊಂದಿಗೆ ಬಸವೇಶ್ವರ ಉತ್ಸವ ಬಹಳ ವಿಜೃಂಭಣೆಯಿಂದ ಜರುಗಿತು ಇದೆ ಸಂದರ್ಭದಲ್ಲಿ ಬಂದ ಭಕ್ತಾದಿಗಳಿಗೆ ಪ್ರಸಾದದ ವ್ಯವಸ್ಥೆಯನ್ನು ಮಾಡಲಾಗಿತ್ತು

ಅನೇಕ ಗಣ್ಯರು ಹಾಗೂ ಭಕ್ತರು ಈ ಮಂಗಳಕರ ಕಾರ್ಯಕ್ರಮದಲ್ಲಿ ಪಾಲ್ಗೊಂಡರ. ಸ್ಥಳೀಯ ಗ್ರಾಮಸ್ಥರು ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ವಿಶೇಷ ಪೂಜೆ ಸಲ್ಲಿಸಿ ದೇವರು ಕೃಪೆಗೆ ಪಾತ್ರರಾದರು.

# ಪೌತಿ ಆಂದೋಲನ ಗ್ರಾಮಕ್ಕೆ ಎಡಿಸಿ ಭೇಟಿ



ಮೈಸೂರು: ಜಿಲ್ಲೆಯಲ್ಲಿ ಮುಂದುವರೆದಿರುವ ಕಂದಾಯ ಇಲಾಖೆಯ ಈ–ಪೌತಿ ಖಾತೆ ಆಂದೋಲನವು ಮೈಸೂರು ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ತಹಶೀಲ್ದಾರರ ನೇತೃತ್ವದಲ್ಲಿ ಪ್ರತಿಯೊಂದು ಗ್ರಾಮ ಆಡಳಿತಾಧಿಕಾರಿಗಳ ಮಟ್ಟದಲ್ಲಿ ನಡೆಯುತ್ತಿದ್ದು , ಬಾಕಿ ಇರುವ ಪೌತಿ ಅರ್ಜಿಗಳನ್ನು ಆಂದೋಲನದ ಮೂಲಕ ಈ ವಾರ ಪ್ರತಿ ಗ್ರಾಮ ಮಟ್ಟದಲ್ಲಿಯೂ ಆಯೋಜಿಸಲಾಗಿದೆ.

ಸೋಮವಾರವೂ ಸಹ ಎಲ್ಲ ತಾಲೂಕುಗಳಲ್ಲಿಯೂ ಯಶಸ್ವಿಯಾಗಿ ಮುಂದುವರೆದಿದ್ದು ಅಪರ ಜಿಲ್ಲಾಧಿಕಾರಿ ಡಾ.ಪಿ. ಶಿವರಾಜು ರವರು ಮೈಸೂರು ತಾಲೂಕಿನ ವರುಣಾ ಹೋಬಳಿಗೆ ಸೇರಿದ ಹಾರೋಹಳ್ಳಿ ಮತ್ತು ಮೆಳ್ಳಹಳ್ಳಿ ಗ್ರಾಮಗಳಿಗೆ ಭೇಟಿ ನೀಡಿ ಅಲ್ಲಿನ ಗ್ರಾಮ ಆಡಳಿತಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ಸಾರ್ವಜನಿಕರೊಂದಿಗೆ ಚರ್ಚೆ ನಡೆಸಿ ರೈತರೊಂದಿಗೆ ಸಂವಾದ ನಡೆಸಿದರು. ಸರ್ಕಾರದ ವತಿಯಿಂದ ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ರೂಪಿಸಿರುವ ಈ ಕಾರ್ಯಕ್ರಮವನ್ನು ಗರಿಷ್ಠ ಪ್ರಮಾಣದಲ್ಲಿ ಸದುಪಯೋಗಪಡಿಸಿಕೊಳ್ಳಬೇಕೆಂದು ಮನವಿ ಮಾಡಿದರು. ಸ್ಥಳದಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಗ್ರಾಮಮಟ್ಟದಲ್ಲಿ ಉಳಿದುಕೊಂಡು ಹೆಚ್ಚಿನ ಸಂಖ್ಯೆಯಲ್ಲಿ ಪ್ರಚಾರ ಮಾಡಿ ಸಾರ್ವಜನಿಕರಿಗೆ ಹಾಗೂ ರೈತರಿಗೆ ಹೆಚ್ಚು ಸೇವೆ ನೀಡಿ ಫಲಾನುಭವಿಗಳಿಗೆ ಸರ್ಕಾರದ ಸೇವೆಯನ್ನು ಕೂಡಲೇ ಒದಗಿಸಬೇಕು ಎಂದು ನೀಡಿದರು. ಹಾರೋಹಳ್ಳಿ ಮತ್ತು ಮೆಳ್ಳಹಳ್ಳಿಗಳಲ್ಲಿ ಸುಮಾರು 1400ರಷ್ಟು ಪೌತಿ ಖಾತೆ ಬಾಕಿ ಇದ್ದು ಕೂಡಲೇ ಒಂದು ವಾರದಲ್ಲಿ ಪರಿಶೀಲಿಸಿ ನಿಯಮಾನುಸಾರ ವಿಲೆಗೊಳಿಸುವ ಮೂಲಕ ರೈತರಿಗೆ ಅನುಕೂಲ ಮಾಡಿಕೊಡುವಂತೆ ಸೂಚನೆ ನೀಡಿದರು. ಸ್ಥಳದಲ್ಲಿ ವರುಣಾ ಹೋಬಳಿಯ ಉಪತಹಶೀಲ್ದಾರ್ , ವರುಣಹೋಬಳಿಯ ಕಂದಾಯ ನಿರೀಕ್ಷಕರು , ಮೆಳ್ಳಹಳ್ಳಿ ಮತ್ತು ಹಾರೋಹಳ್ಳಿಯ ಕಂದಾಯ ಇಲಾಖಾ ಆಡಳಿತಾಧಿಕಾರಿಗಳು ಭಾಗವಹಿಸಿದ್ದರು.

# ಸಾಲೂರು ಶ್ರೀಗಳನ್ನು ಖಾಯಂ ಸದಸ್ಯರನ್ನಾಗಿ ನೇಮಿಸಿ: ಶ್ರೀವತ್ಸ

ಮೈಸೂರು: ಸಾಲೂರು ಮಠದ ಶ್ರೀಗಳನ್ನು ಮಲೈ ಮಹದೇಶ್ವರ ಅಭಿವೃದ್ಧಿ ಪ್ರಾಧಿಕಾರದ ರಾಜ್ಯ ಜಿಲ್ಲಾ ಸಮಿ ತಿಯ ಖಾಯಂ ಸಮಿತಿ ಸದಸ್ಯರನ್ನಾಗಿ ನೇಮಿಸಬೇಕೆಂದು ಬೆಳಗಾಂ ಅಧಿವೇಶನದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ ಆಗ್ರಹಿಸಿದರು.



ಬೆಳಗಾಂ ಅಧಿವೇಶನದಲ್ಲಿ ಮುಜರಾಯಿ ಇಲಾಖೆ ಸಚಿವ ರಾಮಲಿಂಗ ರೆಡ್ಡಿ ಶ್ರೀ ಮಲ್ಲೈ ಮಹದೇಶ್ವರ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ರಾಜ್ಯ ಮಟ್ಟದ ಜಿಲ್ಲಾ ಮಟ್ಟದ ಸಮಿತಿ 2025ರ ವಿಧೇಯಕ ರಚನೆಯ ಚರ್ಚೆಯ ವಿಷಯ ಪ್ರಸ್ತಾಪಿಸಿದಾಗ ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ ಮಲೈ ಮಹದೇಶ್ವರ ಬೆಟ್ಟದಲ್ಲಿರುವ ಪುರಾತನ ಸಾಲೂರು ಮಠದ ನೇತೃತ್ವದಲ್ಲಿಯೇ ಹಲವಾರು ವರ್ಷಗಳಿಂದ ಪೂಜಾವಿಧಾನ ಧಾರ್ಮಿಕ ಕಾರ್ಯಕ್ರಮಗಳು ಜರಗುತ್ತಾ ಬಂದಿದ್ದು, ಹಾಗಾಗಿ ಸಾಲೂರು ಮಠದ ಸ್ವಾಮೀಜಿಯನ್ನು ಶ್ರೀ ಮಲೈ ಮಹದೇಶ್ವರ ಅಭಿವೃದ್ಧಿ ಪ್ರಾಧಿಕಾರ ಹಾಗೂ ರಾಜ್ಯ ಜಿಲ್ಲಾ ಮಟ್ಟದ ಖಾಯಂ ಸಮಿತಿಯ ಸದಸ್ಯರನ್ನಾಗಿ ನೇಮಿಸಬೇಕು ಎಂದು ಆಗ್ರಹಿಸಿದರು. ಇದಕ್ಕೆ ಮುಜರಾಯಿ ಸಚಿವ ರಾಮಲಿಂಗರೆಡ್ಡಿ ಸದನದಲ್ಲಿ ಒಪ್ಪಿಗೆ ಸೂಚಿಸಿದರು.

## ಪ್ರೊ.ಎಸ್.ಶಿವರಾಜಪ್ಪ ಹೇಳಿಕೆ

# ಶಾಮನೂರು ಶಿವಶಂಕರಪ್ಪ ಹೆಸರು ಚಿರಸ್ಥಾಯಿ

ಮೈಸೂರು: ಮಾಜಿ ಸಚಿವ ಶಾಮನೂರು ಶಿವಶಂಕರಪ್ಪ ಅವರು ಹೆಸರು ಚಿರಸ್ಥಾಯಿಯಾಗಿ ಉಳಿಯಲಿದೆ ಎಂದು ಶ್ರೀ ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಪ್ರೊ.ಎಸ್.ಶಿವರಾಜಪ್ಪ ಹೇಳಿದರು.



ಶ್ರೀ ನಟರಾಜ ಶಿಕ್ಷಣ ಸಂಸ್ಥೆಗಳವತಿಯಿಂದ ಮಂಗಳವಾರ ಏರ್ಪಡಿಸಿದ್ದ ಶಾಮನೂರು ಶಿವಶಂಕಪ್ಪರ ನುಡಿನಮನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶಿಕ್ಷಣ, ಆರೋಗ್ಯ ಕ್ಷೇತ್ರಗಳ ಜೊತೆ ಜೊತೆಗೆ ಮಾಡಿದ ಸಮಾಜ ಸೇವೆಯು ಇದಕ್ಕೆ ಕಾರಣ ಎಂದರು. 'ಶರಣರು ಮರಣವೇ ಮಹಾನವಮಿ' ಎನ್ನುತ್ತಾರೆ. ಶಾಮನೂರು ಅವರ ನಿಧನರಾದಾಗ ಜಾತ್ಯತೀತ, ಪಕ್ಷಾತೀತವಾಗಿ ಬಂದ ಜನಸಾಗರವನ್ನು ನೋಡಿದಾಗ ಇದು ನಿಜ ಎನಿಸುತ್ತದೆ. ಶಾಮನೂರು ಅವರು ಕೊಡುಗೈ ದಾನಿಯಾಗಿದ್ದರು. ಜಾತ್ಯತೀತವಾಗಿ ಎಲ್ಲ ವರ್ಗದ ಜನರಿಗೆ ಸಹಾಯ ಮಾಡಿದರು. ದಾವಣಗೆರೆಯಲ್ಲಿ ಬಾಪೂಜಿ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಬೆಳೆಸಿ, ಸುತ್ತಮುತ್ತಲಿನ ಜನರಿಗೆ ಶಿಕ್ಷಣ ನೀಡುವುದರ ಜೊತೆ ಜೊತೆಗೆ ಆಸ್ಪತ್ರೆಗಳನ್ನು ಆರಂಭಿಸುವ ಮೂಲಕ ಆರೋಗ್ಯ ಸೇವೆಯನ್ನು ಒದಗಿಸಿದರು. ದಾವಣಗೆರೆ ವಿಶ್ವವಿದ್ಯಾಲಯ ಆರಂಭಿಸಲು 35 ಎಕರೆ ಜಮೀನನ್ನು ದಾನವಾಗಿ ನೀಡಿದರು. ಹಾಗೆ ನೋಡಿದರೆ ಆ ವಿವಿಗೆ ಶಾಮನೂರು ಶಿವಶಂಕರಪ್ಪ ವಿಶ್ವವಿದ್ಯಾನಿಲಯ ಎಂದೇ ಹೆಸರಿಡಬೇಕಿತ್ತು ಎಂದರು. ಶಾಮನೂರು ಅವರು ಕೇವಲ ದಾವಣಗೆರೆಗೆ ಸೀಮಿತವಾಗಿರಲಿಲ್ಲ. ಚಿತ್ರದುರ್ಗ ಸೇರಿದಂತೆ ಬೇರೆ ಬೇರೆ ಭಾಗಗಳಲ್ಲೂ ಜನರಿಗೆ ನೆರವಾದವು. ನಂಜನಗೂಡು ತಾಲೂಕಿನ ಹಲ್ಲಹಳ್ಳಿ ಸಮೀಪದ ಸಂಗಮದಲ್ಲಿ ಮಹದೇವ ತಾತರ ಗದ್ದುಗೆ ನವೀಕರಣ, ಕ್ಷೇತ್ರದಲ್ಲಿ ಭವನ ನಿರ್ಮಾಣಕ್ಕೆ ಕಾರಣರಾದರು ಎಂದು ಅವರು ಹೇಳಿದರು. ಇದಲ್ಲದೇ ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷರಾಗಿ ಸುದೀರ್ಘಕಾಲ ಕೆಲಸ ಮಾಡಿ, ಹತ್ತು ಹಲವು ಮಹತ್ಕಾರ್ಯಗಳನ್ನು ಮಾಡಿದರು. ಉಳ್ಳವರು ಶಾಮನೂರು ಶಿವಶಂಕರಪ್ಪ ಅವರ ರೀತಿಯಲ್ಲಿ ಸಮಾಜ ಸೇವೆ ಮಾಡಿದರೆ ನಿಜಕ್ಕೂ ಸಾರ್ಥಕತೆ ಕಾಣಬಹುದು ಎಂದರು. ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ ಶಾಮನೂರು ಶಿವಶಂಕರಪ್ಪ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿದರು. ಪ್ರಾಂಶುಪಾಲ ಪದವಿ ಕಾಲೇಜಿನ ಡಾ.ಎಂ.ಶಾರದಾ, ಬಿ.ಇಡಿ ಕಾಲೇಜಿನ ಡಾ.ಮಹೇಶ್ ದಳಪತಿ, ಪಿಯು ಕಾಲೇಜಿನ ವಿ.ಡಿ.ಸುನೀತಾರಾಣಿ, ನರ್ಸಿಂಗ್ ಕಾಲೇಜಿನ ಡಾ.ಎಂ.ರಾಜೇಶ್, ವಿವಿಧ ವಿಭಾಗಗಳ ಮುಖ್ಯಸ್ಥರಾದ ಪವಿತ್ರಾ, ದಿಲೀಪ್, ಪದ್ಮಾ, ಮಮತಾ, ವಿ.ಪ್ರದೀಪ್ ಇದ್ದರು. ಚೂಡಾಮಣಿ ವಚನ ಗಾಯನ ನಡೆಸಿಕೊಟ್ಟರು. ಬಿ.ರಾಧಾ ಕಾರ್ಯಕ್ರಮ ನಿರೂಪಿಸಿದರು.

# ಅಪರಿಚಿತ ಕಾರು ಡಿಕ್ಕಿ ಬೈಕ್ ಸವಾರ ಸಾವು

ಚಾಮರಾಜನಗರ: ಅಪರಿಚಿತ ಕಾರೊಂದು ಬೈಕ್ ಗೆ ಡಿಕ್ಕಿ ಹೊಡೆದು ಸವಾರ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಹರದನಹಳ್ಳಿ ಬಳಿ ಸಂಭವಿಸಿದೆ.

ಬಸವಪುರ ಗ್ರಾಮದ ನಾಗರಾಜು (40) ಸಾವನ್ನಪ್ಪಿದ ವ್ಯಕ್ತಿ. ಬೈಕ್ ಗೆ ಡಿಕ್ಕಿ ಹೊಡೆದು ಕಾರು ಚಾಲಕ ಪರಾರಿಯಾಗಿದ್ದಾನೆ ಎಂದು ತಿಳಿದು ಬಂದಿದೆ. ಘಟನೆ ತಿಳಿದ ಕೂಡಲೇ ಪೊಲೀಸರು ಸ್ಥಳಕ್ಕೆ ಧಾವಿಸಿದ ಅಪಘಾತ ಕುರಿತು ಪರಿಶೀಲನೆ ನಡೆಸಿ ಮೃತ ದೇಹವನ್ನು ನಗರದ ಹೊರವಲಯದ ಸಿಮ್ಸ್ ಆಸ್ಪತ್ರೆಗೆ ರವಾನಿಸಿ, ಮುಂದಿನ ಕ್ರಮ ಕೈಗೊಂಡಿದ್ದಾರೆ.

# ಡಿ.21ಕ್ಕೆ ರಾಷ್ಟ್ರೀಯ ನೃತ್ಯೋತ್ಸವ



ಮೈಸೂರು: ನಿಮಿಷಾಂಬ ಡ್ಯಾನ್ಸ್ ಪ್ರಮೋರ್ಸ್ ವತಿಯಿಂದ ಡಿ.21ರ ಸಂ.5ಕ್ಕೆ ನಗರದ ಕಲಾ ಮಂದಿರದಲ್ಲಿ ಹೆಜ್ಜೆ, ಗೆಜ್ಜೆ ರಾಷ್ಟ್ರೀಯ ನೃತ್ಯೋತ್ಸವ ಆಯೋಜಿಸಲಾಗಿದೆ ಎಂದು ಸಂಸ್ಥಾಪಕ ವಿದ್ವಾನ್ ಶ್ರೀಧರ್ ಜೈನ್ ತಿಳಿಸಿದರು.

ಡಾ. ಗಿರಿಜಾ ಲೋಕೇಶ್, ಪೂಜಾ ಲೋಕೇಶ್, ಸೃಜನ್ ಲೋಕೇಶ್ ಹಾಗೂ ಗ್ರೀಷ್ಮಾ ಸೃಜನ್ ಲೋಕೇಶ್ ಅತಿಥಿಗಳಾಗಿರುವರು. ಕಳೆದ ಬಾರಿ ಆಯೋಜಿಸಿದಾಗ ಸುಮಾರು ಒಂದೂವರೆ ಸಾವಿರ ಮಂದಿ ವೀಕ್ಷಿಸಿದರು. ಈ ಬಾರಿ ಸುಮಾರು 200 ಕಲಾವಿದವರು ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಶಿವ ಪಾರ್ವತಿ ನೃತ್ಯ ಸ್ಪರ್ಧೆ, ಶಿವ ಪಾರ್ವತಿ ಪ್ರೀತಿ, ಪೂರ್ಣ ನೃತ್ಯ ತಾಂಡವ ಈ ಬಾರಿಯ ವಿಶೇಷವಾಗಿದೆ. ಇವುಗಳನ್ನು 5 ರಿಂದ 59 ವರ್ಷದವರೆಗಿನ ಕಲಾವಿದರ ಪ್ರಸ್ತುತ ಪಡಿಸಲಿದ್ದಾರೆ. ಯಾವುದೇ ಟಿಕೆಟ್ ನಿಗದಿ ಪಡಿಸಿಲ್ಲ. ಸಂಪೂರ್ಣ ಉಚಿತ ಪ್ರವೇಶವಿದೆ ಎಂದರು. ಇದು ಸುಮಾರು ಎರಡು ಗಂಟೆಯ ಕಾರ್ಯಕ್ರಮವಾಗಿದ್ದು, ಆಂಕರಿಂಗ್ ಇರುವುದಿಲ್ಲ. ತಡೆ ರಹಿತವಾಗಿ ಸಾಗುತ್ತದೆ. ಸಮಾಜಕ್ಕೆ ಏನಾದರೂ ಕೊಡುಗೆ ನೀಡಬೇಕೆಂದು ತಮ್ಮ ಸಂಸ್ಥೆ ಶ್ರಮಿಸುತ್ತಿದೆ. ಕೂಲಿ ಕಾರ್ಮಿಕರ ಮಕ್ಕಳಿಗೂ ಇಲ್ಲಿ ಉಚಿತವಾಗಿ ಭರತನಾಟ್ಯಂ ಕಲಿಸಲಾಗುತ್ತಿದೆ ಎಂದು ವಿವರಿಸಿದರು. ಸಂಜನಾ ನಾರಾಯಣ್, ರೇಖಾಶ್ರೀ ಮಂಜುನಾಥ್ ಪಲ್ಲವಿ ಶೆಟ್ಟಿ ಇದ್ದರು.

# ಜಿಲ್ಲಾ ಕನ್ನಡ ಜಾಗೃತಿ ಸಮಿತಿಗೆ ಅಧಿಕಾರೇತರ ಸದಸ್ಯರ ನೇಮಕ

ಚಾಮರಾಜನಗರ, ಅಭಿವೃದ್ಧಿ ಪ್ರಾಧಿಕಾರದ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಜಿಲ್ಲಾ ಮಟ್ಟದಲ್ಲಿ ಕನ್ನಡ ಜಾಗೃತಿ ಸಮಿತಿಗೆ ಸದಸ್ಯರನ್ನು ನೇಮಕ ಮಾಡಿ ಆದೇಶ ಹೊರಡಿಸಲಾಗಿದೆ.

ಚಾಮರಾಜನಗರ ಜಿಲ್ಲೆಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರಾಗಿ ಟಿ. ಗುರುರಾಜ್ ಅವರನ್ನು, ಜಿಲ್ಲಾ ಕನ್ನಡ ಜಾಗೃತಿ ಸಮಿತಿಗೆ ಸದಸ್ಯರನ್ನಾಗಿ ಪದ್ಮಾ ಪುರುಷೋತ್ತಮ್, ಎಂ.ಬಿ. ಗುರುಸ್ವಾಮಿ, ರೂಬಿನ್ ಸಂಜಯ, ಮಹೇಶ್. ಪಿ, ಅರುಣ್ ಕುಮಾರ್ ಎಂ ಅವರನ್ನು ನೇಮಕ ಮಾಡಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮೊದಲ ಪುಟದಿಂದ

# ಸ್ಥಳೀಯ ಸಂಸ್ಥೆಗಳಿಗೆ ಶೀಘ್ರ ಚುನಾವಣೆ

ಬಿಜೆಪಿಗೆ ತಿರುಗೇಟು ನೀಡಿದರು.

ಇದಕ್ಕೆ ಬಿಜೆಪಿ ಸದಸ್ಯರು ಆಕ್ಷೇಪ ಮಾಡಿ, ಚುನಾವಣೆ ಮಾಡದೇ ಆರೋಪ ಮಾಡಬೇಡಿ ಎಂದು ಆಕ್ರೋಶ ಹೊರಹಾಕಿದರು. ಈ ವೇಳೆ ಬಿಜೆಪಿ– ಕಾಂಗ್ರೆಸ್ ಸದಸ್ಯರ ನಡುವೆ ಮಾತಿನ ಚಕಮಕಿ ನಡೆಯಿತು. ಮಧ್ಯ ಪ್ರವೇಶ ಮಾಡಿದ ಸಚಿವ ಬೈರತಿ ಸುರೇಶ್, ಬಿಜೆಪಿ ಇದ್ದಾಗ ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್, ಬಿಬಿಎಂಪಿ ಚುನಾವಣೆ ಮಾಡಿಲ್ಲ. 7 ವರ್ಷ ಚುನಾವಣೆ ಮಾಡಿಲ್ಲ ಎಂದು ಹೇಳಿದರು.

ಬೈರತಿ ಸುರೇಶ್ ಮಾತಿಗೆ ಸಿ.ಟಿ ರವಿ ಸೇರಿ ಬಿಜೆಪಿ ಸದಸ್ಯರು ಆಕ್ರೋಶ ಹೊರ ಹಾಕಿದರು. ನೀವು ಬಂದು 2.5 ವರ್ಷ ಆದರೂ ಯಾಕೆ ಚುನಾವಣೆ ಮಾಡಲಿಲ್ಲ ಕಿಡಿಕಾರಿದರು. ಈ ವೇಳೆ ಬೈರತಿ ಸುರೇಶ್ ಮತ್ತು ಬಿಜೆಪಿ ಸದಸ್ಯರ ನಡುವೆ ಮಾತಿನ ಚಕಮಕಿ ನಡೆಯಿತು. ಅಂತಿಮವಾಗಿ ಸಚಿವ ರಹೀಂಖಾನ್ ಉತ್ತರ ನೀಡಿ, ನಗರ ಸ್ಥಳೀಯ ಸಂಸ್ಥೆ ಚುನಾವಣೆ ನಡೆಸಲು ಸಿದ್ಧತೆ ಆಗಿದೆ. ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಪ್ರಕ್ರಿಯೆ ಮುಗಿಸಿ ಚುನಾವಣೆ ನಡೆಸುತ್ತೇವೆ ಎಂದು ತಿಳಿಸಿದರು.

# ಅಧ್ಯಕ್ಷ ಸ್ಥಾನಕ್ಕೆ ಏಕೆ ಕಚ್ಚಾಟ?

ಬರ್ತೇವೆ. ಮತ್ತೆ ನಾವೇ ಅಧಿಕಾರ ಮಾಡ್ತೇವೆ ಎಂದು ಹೇಳಿದ ಸಿಎಂ ಮಾತಿಗೆ ಆಡಳಿತ ಪಕ್ಷದ ಸದಸ್ಯರು ಮೇಜು ಕುಟ್ಟಿದರು.

# ವ್ಯಾಪಾರ ಅನಿಶ್ಚಿತತೆ ಕಾರಣ

ವಿದೇಶಿ ಸಾಂಸ್ಥಿಕ ಹೂಡಿಕೆದಾರರ ಹೊರಹರಿವು ಮುಂದುವರಿದಿರುವುದರಿಂದ ಸೋಮವಾರ ವ್ಯಾಪಾರ ಕೊರತೆಯಲ್ಲಿನ ಕಡಿತವು ರೂಪಾಯಿಯಲ್ಲಿ ಚೇತರಿಕೆಯನ್ನು ತರಲು ಸಾಧ್ಯವಾಗಲಿಲ್ಲ ಎಂದು ಅವರು ಹೇಳಿದರು.

ಸಗಟು ಬೆಲೆ ಹಣದುಬ್ಬರ ನವೆಂಬರ್‌ನಲ್ಲಿ ಸತತ ಎರಡನೇ ತಿಂಗಳು (–)0.32 ಋಣಾತ್ಮಕವಾಗಿಯೇ ಉಳಿದಿದೆ ಎಂದು ಸರ್ಕಾರಿ ದತ್ತಾಂಶಗಳು ತೋರಿಸಿವೆ. ಸಗಟು ಬೆಲೆ ಸೂಚ್ಯಂಕ ಆಧಾರಿತ ಹಣದುಬ್ಬರವು ಅಕ್ಟೋಬರ್‌ನಲ್ಲಿ (–)1.21 ಪ್ರತಿಶತ ಮತ್ತು ಕಳೆದ ವರ್ಷ ನವೆಂಬರ್‌ನಲ್ಲಿ 2.16 ಪ್ರತಿಶತದಷ್ಟಿತ್ತು.

# ಹೆಚ್‌ಡಿಕೆ ಹುಟ್ಟುಹಬ್ಬ: ರೋಗಿಗಳಿಗೆ ಹಣ್ಣು–ಹಂಪಲು ವಿತರಣೆ

ಚಾಮರಾಜನಗರ, ಮಾಜಿ ಮುಖ್ಯಮಂತ್ರಿ ಹಾಗೂ ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವ ಹೆಚ್ .ಡಿ .ಕುಮಾರಸ್ವಾಮಿ ಅವರು 66 ನೇ ಹುಟ್ಟುಹಬ್ಬದ ಅಂಗವಾಗಿ ಜೆಡಿಎಸ್ ಮುಖಂಡ ಆಲೂರುಮಲ್ಲು ಅವರ ನೇತೃತ್ವದಲ್ಲಿ ನಗರದ ಜಿಲ್ಲಾಸ್ಪತ್ರೆಯ ಒಳರೋಗಿಗಳಿಗೆ ಹಣ್ಣು–ಹಂಪಲು ವಿತರಿಸಲಾಯಿತು.

ಈ ಸಂದರ್ಭದಲ್ಲಿ ಮುಖಂಡರ ಆಲೂರುಮಲ್ಲು ಮಾತನಾಡಿ, ಮಾಜಿ ಮುಖ್ಯಮಂತ್ರಿ ಹಾಗೂ ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವ ಹೆಚ್ ಡಿ ಕುಮಾರಸ್ವಾಮಿ ಅವರು 66 ನೇ ಹುಟ್ಟುಹಬ್ಬದ ಅಂಗವಾಗಿ ನಗರದ ಸರ್ಕಾರಿ ಜಿಲ್ಲಾಸ್ಪತ್ರೆಯಲ್ಲಿ ಒಳರೋಗಿಗಳಿಗೆ ಹಣ್ಣುಹಂಪಲು ವಿತರಿಸಲಾಗಿದೆ.

ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಭಗವಂತ ದೀರ್ಘ ಆಯಸ್ಸು ಮತ್ತು ಆರೋಗ್ಯಕರ ಜೀವನ ದಯಪಾಲಿಸಲಿ ಎಂದು ಆಶಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಶಸ್ತ್ರ ಚಿಕಿತ್ಸಾ ವಿಭಾಗದ ಡಾ.ಚಿನ್ನಭೋವಿ, ಡಾ.



ಯೋಗೇಶ್, ಹೆರಿಗೆ ವಿಭಾಗದ ಮುಖ್ಯಸ್ಥ ಡಾ. ಪ್ರದೀಪ್, ನರ್ಸಿಂಗ್ ಅಧೀಕ್ಷಕಿ ಚಂದ್ರಕಲಾ , ಮಹೇಶ್ , ಜೆಡಿಎಸ್ ಟೌನ್ ಅಧ್ಯಕ್ಷ ಜಿ.ಎಂ.ಶಂಕರ್, ಜಿಲ್ಲಾ ಉಪಾಧ್ಯಕ್ಷ ಮಹೇಶ್ ಗೌಡ, ರಾಜ್ಯ ಮಾಜಿ ಕಾರ್ಯದರ್ಶಿ ರಾಜು ಹೊಂಗನೂರು, ಹಬೀಬ್, ಮುಖಂಡರಾದ ಪಣ್ಯದಹುಂಡಿ ರಾಜಣ್ಣ, ಎಲ್ ಐಸಿ, ಮಂಜು ಹೆಗ್ಗೋಠಾರ, ರಾಜು ಮೇಗಲಹುಂಡಿ, ನಾಗರಾಜು ಇತರರು ಹಾಜರಿದ್ದರು.

# ಡಿ.21ಕ್ಕೆ ರಾಷ್ಟ್ರೀಯ ನೃತ್ಯೋತ್ಸವ

ಮೈಸೂರು: ನಿಮಿಷಾಂಬ ಡ್ಯಾನ್ಸ್ ಪ್ರಮೋರ್ಸ್ ವತಿಯಿಂದ ಡಿ.21ರ ಸಂ.5ಕ್ಕೆ ನಗರದ ಕಲಾ ಮಂದಿರದಲ್ಲಿ ಹೆಜ್ಜೆ, ಗೆಜ್ಜೆ ರಾಷ್ಟ್ರೀಯ ನೃತ್ಯೋತ್ಸವ ಆಯೋಜಿಸಲಾಗಿದೆ ಎಂದು ಸಂಸ್ಥಾಪಕ ವಿದ್ವಾನ್ ಶ್ರೀಧರ್ ಜೈನ್ ತಿಳಿಸಿದರು.

ಡಾ. ಗಿರಿಜಾ ಲೋಕೇಶ್, ಪೂಜಾ ಲೋಕೇಶ್, ಸೃಜನ್ ಲೋಕೇಶ್ ಹಾಗೂ ಗ್ರೀಷ್ಮಾ ಸೃಜನ್ ಲೋಕೇಶ್ ಅತಿಥಿಗಳಾಗಿರುವರು. ಕಳೆದ ಬಾರಿ ಆಯೋಜಿಸಿದಾಗ ಸುಮಾರು ಒಂದೂವರೆ ಸಾವಿರ ಮಂದಿ ವೀಕ್ಷಿಸಿದರು. ಈ ಬಾರಿ ಸುಮಾರು 200 ಕಲಾವಿದವರು ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಶಿವ ಪಾರ್ವತಿ ನೃತ್ಯ ಸ್ಪರ್ಧೆ, ಶಿವ ಪಾರ್ವತಿ ಪ್ರೀತಿ, ಪೂರ್ಣ ನೃತ್ಯ ತಾಂಡವ ಈ ಬಾರಿಯ ವಿಶೇಷವಾಗಿದೆ. ಇವುಗಳನ್ನು 5 ರಿಂದ 59 ವರ್ಷದವರೆಗಿನ ಕಲಾವಿದರ ಪ್ರಸ್ತುತ ಪಡಿಸಲಿದ್ದಾರೆ. ಯಾವುದೇ ಟಿಕೆಟ್ ನಿಗದಿ ಪಡಿಸಿಲ್ಲ. ಸಂಪೂರ್ಣ ಉಚಿತ ಪ್ರವೇಶವಿದೆ ಎಂದರು.

ಇದು ಸುಮಾರು ಎರಡು ಗಂಟೆಯ ಕಾರ್ಯಕ್ರಮವಾಗಿದ್ದು, ಆಂಕರಿಂಗ್ ಇರುವುದಿಲ್ಲ. ತಡೆ ರಹಿತವಾಗಿ ಸಾಗುತ್ತದೆ. ಸಮಾಜಕ್ಕೆ ಏನಾದರೂ ಕೊಡುಗೆ ನೀಡಬೇಕೆಂದು ತಮ್ಮ ಸಂಸ್ಥೆ ಶ್ರಮಿಸುತ್ತಿದೆ. ಕೂಲಿ ಕಾರ್ಮಿಕರ ಮಕ್ಕಳಿಗೂ ಇಲ್ಲಿ ಉಚಿತವಾಗಿ ಭರತನಾಟ್ಯಂ ಕಲಿಸಲಾಗುತ್ತಿದೆ ಎಂದು ವಿವರಿಸಿದರು.



ಸಂಜನಾ ನಾರಾಯಣ್, ರೇಖಾಶ್ರೀ ಮಂಜುನಾಥ್ ಪಲ್ಲವಿ ಶೆಟ್ಟಿ ಇದ್ದರು. ಮಾಜಿ ಸಚಿವ ಸಾ.ರಾ. ಮಹೇಶ್, ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ, ವಿಧಾನ ಪರಿಷತ್ತು ಸದಸ್ಯರಾದ ಕೆ.ವಿವೇಕಾನಂದ, ಸಿ.ಎನ್.ಮಂಜೇಗೌಡ, ಮಾಜಿ ಸಂಸದ ಪ್ರತಾಪ್ ಸಿಂಹ, ಮಾಜಿ ಶಾಸಕರಾದ ಎಂ.ಅಶ್ವಿನ್ ಕುಮಾರ್, ಮಹದೇವು, ಮಾಜಿ ಮೇಯರ್‌ಗಳಾದ ಆರ್.ಲಿಂಗಪ್ಪ, ರವಿಕುಮಾರ್(ಚಿನ್ನಿ ರವಿ), ಜೆಡಿಎಸ್ ಉಪಾಧ್ಯಕ್ಷ ಸುಧಾಕರ ಎಸ್. ಶೆಟ್ಟಿ, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ದ್ವಾರಕೀಶ್, ಮಹಾನಗರ ಪಾಲಿಕೆ ಮಾಜಿ ಸದಸ್ಯರಾದ ಎಸ್.ಬಿ.ಎಂ.ಮಂಜು, ಕೆ.ವಿ.ಶ್ರೀಧರ್, ಅಶ್ವಿನಿ ಅನಂತು, ಶೋಭಾ, ಪ್ರೇಮಾ ಶಂಕರೇಗೌಡ, ಮುಖಂಡರಾದ ಸೋಮು, ದೇವರಾಜು, ನಿಶಾಂತ್ ದಾಸೇಗೌಡ, ದಿನೇಶ್ ಕುಮಾರ್ ಪಾಲ್ಗೊಂಡಿದ್ದರು.

# ನಾಲ್ಕು ಮನೆಗೊಂದು ಬೀದಿ ನಾಯಿ ದತ್ತು ಪಡೆಯಿರಿ

## ಶೇಖ್ ತನ್ವೀರ್ ಆಸೀಫ್ ಕರೆ । ದತ್ತು ಸ್ವೀಕಾರ ಕಾರ್ಯಕ್ರಮ

ಮೈಸೂರು: ನಾಲ್ಕು ಮನೆಗೊಂದು ಬೀದಿ ನಾಯಿ ಮರಿಗಳನ್ನು ದತ್ತು ಪಡೆಯುವ ಮೂಲಕ ಮಾನವೀಯತೆ ತೋರಿ ಎಂದು ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ತಿಳಿಸಿದರು.

ಮೈಸೂರು ಮಹಾನಗರಪಾಲಿಕೆ, ಪಶು ಸಂಗೋಪನಾ ಇಲಾಖೆವತಿಯಿಂದ ಪೀಪಲ್ ಫಾರ್ ಅನಿಮಲ್ಸ್ ಸಂಸ್ಥೆಯ ಸಹಯೋಗದಲ್ಲಿ ಪುರಭವನ ಆವರಣದಲ್ಲಿ ಮಂಗಳವಾರ ಆಯೋಜಿಸಿದ್ದ ಬೀದಿ ನಾಯಿ ಮರಿಗಳ ಸಾಂಕೇತಿಕ ದತ್ತು ಸ್ವೀಕಾರ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ನಮ್ಮಲ್ಲಿರುವ ರಾಯನಕೆರೆಯ ಅಪರೇಷನ್ ಥಿಯೇಟರ್ ಹಾಗೂ ಇನ್ ಸ್ಟಿಟ್ಯೂಟ್ ನಲ್ಲಿರುವ ನಾಯಿಗಳ ಸಂರಕ್ಷಣೆ, ನಿರ್ವಹಣೆ ಮಾಡಲು ವ್ಯವಸ್ಥೆ ಮಾಡಲು ತಯಾರಿಸಿದ್ದೇವೆ. ಅನಿಮಲ್ ವೆಲ್ ಫೇರ್ ಕಾರ್ಯಸೂಚಿಯಂತೆ ನಾವು ಕರ್ತವ್ಯ ನಿರ್ವಹಣೆ ಮಾಡುತ್ತಿದ್ದೇವೆ ಎಂದರು.

ಈ ನಾಯಿ ದತ್ತು ಕಾರ್ಯಕ್ರಮ ಯಾಕೆ ಆಯೋಜಿಸಿದ್ದೇವೆಂದರೆ ನಮ್ಮ ದೇಶದಲ್ಲಿ ನಾಯಿಗಳ ಸಂರಕ್ಷಣೆ ವಿಚಾರದಲ್ಲಿ ನಮ್ಮ ಬೀದಿ ನಾಯಿ ಕಲ್ಪನೆಯಿದೆ. ಉಳಿದೆಡೆ ಇಂತಹ ಕಲ್ಪನೆ ಎಲ್ಲಿಯೂ ಇಲ್ಲವಾಗಿದೆ. ಇದಕ್ಕೆ ಬೀದಿನಾಯಿಗಳಿಗೆ ವ್ಯಾಕ್ಸಿನೇಷನ್ ಮಾಡಿ ಸಂರಕ್ಷಿಸಬೇಕಿದೆ. ನಮ್ಮಲ್ಲಿರುವ ನಾಯಿ ತಳಿಗಳು ತುಂಬಾ ಅಪರೂಪದ ತಳಿಗಳಾಗಿವೆ. ಇದನ್ನು ಜನರಿಗೆ ತಿಳಿ ಹೇಳಬೇಕಿದೆ. ಜನರ ಭದ್ರತೆ ಹಾಗೂ ಪ್ರೀತಿಗೂ ಬೀದಿ ನಾಯಿಗಳ ಬದ್ಧತೆ ಹೆಚ್ಚಿದೆ. ನಮ್ಮಲ್ಲಿ ಬೀದಿ ನಾಯಿ ಎಂದರೆ ಸ್ವಚ್ಚತೆ ಇಲ್ಲದ ನಾಯಿಗಳೆಂಬ ಮಾತಿದೆ. ಆರೋಗ್ಯವಂತ ನಾಯಿಗಳನ್ನು ನಾವು ದತ್ತು ನೀಡಬೇಕಿದೆ.




ಎರಡು ಲಕ್ಷಕ್ಕಿಂತ ಹೆಚ್ಚಿನ ಮನೆಗಳು ನಗರದಲ್ಲಿವೆ. ಅವುಗಳಿಂದ ಮನೆ ಮುಂದೆ ಇರುವ ಮಕ್ಕಳಿಗೆ ಸಮಸ್ಯೆ ಆಗಬಾರದು. 10 ಲಕ್ಷಕ್ಕಿಂತ ಹೆಚ್ಚಿನಜನ ನಗರದಲ್ಲಿದ್ದಾರೆ. ನಗರದಲ್ಲಿ ನಾಯಿಗಳು 50 ಸಾವಿರಕ್ಕಿಂತ ಕಮ್ಮಿ ಇದೆ. ನಾಲ್ಕು ಮನೆಗೊಂದು ನಾಯಿ ದತ್ತು ಪಡೆಯಬೇಕಿದೆ ಎಂದರು.

ಸಕ್ರಿಯ ದತ್ತು ಸ್ವೀಕಾರದ ಮೂಲಕ ನಾಗರಿಕರು ಬೀದಿ ನಾಯಿಮರಿಗಳಿಗೆ ಶಾಶ್ವತ ಮನೆ ಒದಗಿಸಬಹುದಾದರೆ, ನಿಷ್ಕ್ರಿಯ ದತ್ತು ಸ್ವೀಕಾರದಲ್ಲಿ ಬೀದಿ ಪ್ರಾಣಿಗಳ ಆರೈಕೆ, ಆಹಾರ ಪೂರೈಕೆ, ಲಸಿಕೀಕರಣ, ವಂಧ್ಯಕರಣ ಹಾಗೂ ಮಾನವೀಯ ಸಹಬಾಳ್ವೆ ಸೇರಿವೆ ಎಂದು ವಿವರಿಸಿದರು. ನಗರದಲ್ಲಿ ಮಾನವೀಯ ಹಾಗೂ ದೀರ್ಘಕಾಲಿಕ ಬೀದಿ ಪ್ರಾಣಿ ನಿರ್ವಹಣೆಗೆ ಸಾರ್ವಜನಿಕರ ಸಕ್ರಿಯ ಭಾಗವಹಿಸುವಿಕೆ ಅತ್ಯಂತ ಅಗತ್ಯವಿದೆ ಎಂದು ಹೇಳಿದರು.


ಪಶು ಸಂಗೋಪನಾ ಇಲಾಖೆ ಸಹಾಯಕ ನಿರ್ದೇಶಕ ಡಾ.ಪೂರ್ಣಾನಂದ ಮಾತನಾಡಿ, ಬೀದಿಗಳ ಸಾಕಾಣಿಕೆ ಮನೋಭಾವನೆ ಜನರಲ್ಲಿ ಬಂದರೆ ಬೀದಿ ನಾಯಿಗಳ ಹಾವಳಿಯೂ ಕಡಿಮೆ ಆಗಲಿದೆ. ಎಂಟು ಇಲಾಖೆಗಳು ಒಗ್ಗೂಡಿ ಬೀದಿ ನಾಯಿಗಳ ಉಪಟಳ ತಡೆಯುವ ನಿಟ್ಟಿನಲ್ಲಿ ನಾಯಿ ಮರಿಗಳನ್ನು ದತ್ತು ಪಡೆಯಲು ಅರಿವು ಮೂಡಿಸಲಾಗುತ್ತಿದೆ ಎಂದು ತಿಳಿಸಿದರು.ನಗರ ಪಾಲಿಕೆ ಆರೋಗ್ಯಾಧಿಕಾರಿ ಡಾ.ಎನ್.ಪಿ.ವೆಂಕಟೇಶ್, ಪಶು ಸಂಗೋಪನಾ ಇಲಾಖೆಯ ಸಹಾಯಕ ನಿರ್ದೇಶಕ ಪೂರ್ಣಾನಂದ, ನಿವೃತ್ತ ಅಧಿಕಾರಿಗಳಾದ ಡಾ.ಸುರೇಶ್, ಡಾ.ತಿರುಮಲೇಗೌಡ,ಪೀಪಲ್ ಫಾರ್ ಅನಿಮಲ್ಸ್ ಸಂಸ್ಥೆ ವ್ಯವಸ್ಥಾಪಕ ಟ್ರಸ್ಟಿ ಸವಿತಾ ನಾಗಭೂಷಣ್ ಇನ್ನಿತರರು ಉಪಸ್ಥಿತರಿದ್ದರು.

# ರೈಲ್ವೆ ವರ್ಕ್‌ಶಾಪ್ ಬಳಿ ಮೇಲೆ ಕುಳಿತ ಚಿರತೆ?

ಮೈಸೂರು: ಅಶೋಕಪುರಂನ ರೈಲ್ವೆ ವರ್ಕ್‌ಶಾಪ್ ಮೈದಾನದ ಮರದ ಮೇಲೆ ಚಿರತೆ ಕುಳಿತಿರುವ ಚಿತ್ರ ವೈರಲ್ ಆಗಿದ್ದು, ಸಾರ್ವಜನಿಕರಲ್ಲಿ ಆತಂಕ ಮೂಡಿಸಿದೆ.

ಈ ಪ್ರದೇಶದಲ್ಲಿ ಭಾನುವಾರ ಚಿರತೆ ಪತ್ತೆಯಾಗಿದೆ ಎಂಬ ವದಂತಿ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಪರಿಶೀಲನೆ ನಡೆಸುತ್ತಿದ್ದರು. ಅಶೋಕಪುರಂನಲ್ಲಿರುವ ಗಂಧದ ಎಣ್ಣೆ ಕಾರ್ಖಾನೆ ಬಳಿ ಭಾನುವಾರ ಸಂಜೆ ಚಿರತೆ ಕಾಣಿಸಿಕೊಂಡಿದೆ ಎಂದು ಹಲವರು ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿದ್ದು, ಕೆಲ ಸ್ಥಳೀಯರೂ ಚಿರತೆಯನ್ನು ನೋಡಿದ್ದಾರೆಂದು ಹೇಳುತ್ತಿದ್ದರು. ಇದೀಗ ಮರದ ಮೇಲೆ ಕುಳಿತಿರುವ ಚಿತ್ರ ವೈರಲ್ ಆಗಿದ್ದು, ಚಿರತೆ ಕಾಣಿಸಿಕೊಂಡಿರುವುದು ದೃಢಪಟ್ಟಿದೆ.


ಸಾರ್ವಜನಿಕರಿಂದ ಮಾಹಿತಿ ತಿಳಿಯುತ್ತಿದ್ದಂತೆ ಅರಣ್ಯ ಇಲಾಖೆ ಸಿಬ್ಬಂದಿ ಸ್ಥಳಕ್ಕೆ ತೆರಳಿ, ಪರಿಶೀಲನೆ ನಡೆಸಿದ್ದಾರೆ. ಮುಂಜಾಗ್ರತಾ ಕ್ರಮವಾಗಿ ಅಶೋಕಪುರಂ, ಜಯನಗರ, ಶ್ರೀರಾಂಪುರ ಹಾಗೂ ಸುತ್ತಮುತ್ತಲ ಪ್ರದೇಶದಲ್ಲಿ ಎಚ್ಚರಿಕೆಯಿಂದ ಓಡಾಡುವಂತೆ ಸೂಚಿಸಲಾಗಿದೆ. ಈ ಬಗ್ಗೆ ಪೊಲೀಸರೂ ಸಾರ್ವಜನಿಕರಿಗೆ ಜಾಗೃತಿ ಮೂಡಿಸುತ್ತಿದ್ದಾರೆ. ಕ್ಷಿಪ್ರ ಚಿರತೆ ಕಾರ್ಯಪಡೆ, ಅಶೋಕಪುರಂ ರೈಲ್ವೆ ಹಳಿ ಭಾಗದಲ್ಲಿ ಪರಿಶೀಲನೆ ನಡೆಸುತ್ತಿರುವುದಾಗಿ ತಿಳಿದುಬಂದಿದೆ.



# ಮೃತ ಸಿಬ್ಬಂದಿ ಕುಟುಂಬಕ್ಕೆ ಲಕ್ಷ ರೂ. ವಿತರಿಸಿದ ಮೈಮುಲ್ ಅಧ್ಯಕ್ಷ

ಮೈಸೂರು: ಇತ್ತೀಚೆಗೆ ಅಕಾಲಿಕವಾಗಿ ನಿಧನರಾದ ಜಿಲ್ಲೆಯ ಎಚ್.ಡಿ.ಕೋಟೆ ತಾಲ್ಲೂಕಿನ ಆಲನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ರಾಜೇಶ್ ಅವರ ಕುಟುಂಬಕ್ಕೆ ಮೈಸೂರು ಜಿಲ್ಲಾ ಹಾಲು ಒಕ್ಕೂಟಗಳ ಸಹಕಾರ ಸಂಘ ನಿಯಮಿತದ ಅಧ್ಯಕ್ಷ ಈರೇಗೌಡ 1 ಲಕ್ಷ ರೂ.ಗಳ ಪರಿಹಾರದ ಚೆಕ್ ಅನ್ನು ವಿತರಿಸಿದರು.

ಎಚ್.ಡಿ.ಕೋಟೆ ಆಲನಹಳ್ಳಿ ಸಹಕಾರ ಸಂಘದ ಆವರಣದಲ್ಲಿ ಚೆಕ್ ಅನ್ನು ಮೃತ ರಾಜೇಶ್ ಪತ್ನಿ ಯೋಗಮಣಿ ಅವರಿಗೆ ವಿತರಿಸಿದರು. ಆಲನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಎ.ಪಿ.ಶಿವರಾಜು, ಉಪಾಧ್ಯಕ್ಷ ಮಲ್ಲಿಕಾರ್ಜುನ ಚಾರ್, ಸಂಘದ ಕಾರ್ಯದರ್ಶಿಯವರು ನಿರ್ದೇಶಕರಾದ ಶಿವರಾಜು, ರವಿಶಂಕರ್, ಶಿವಶಂಕರ್, ಸೌಭಾಗ್ಯ, ರಾಜನಾಯಕ, ವಸಂತ, ಕುಮಾರ್, ನವೀನ್ ಕುಮಾರ್ ಮತ್ತು ಇನ್ನಿತರರು ಉಪಸ್ಥಿತರಿದ್ದರು.



# ಶ್ರೀ ಸಿದ್ದರಾಮದೇವರ ಆರಾಧನಾ ಮಹೋತ್ಸವ



ಗುಂಡ್ಲುಪೇಟೆ: ತಾಲೂಕಿನ ಸೋಮಹಳ್ಳಿ ಗ್ರಾಮದಲ್ಲಿ ಶ್ರೀ ಸಿದ್ದರಾಮದೇವರ ಆರಾಧನಾ ಮಹೋತ್ಸವ ಶ್ರದ್ಧಾಭಕ್ತಿಯಿಂದ ನಡೆಯಿತು.

ತಾಲೂಕಿನ ಹೊರೆಯಾಲದ ಶ್ರೀ ಸಿದ್ದರಾಮದೇವರ ಆರಾಧನೆಯನ್ನು ಮಂಗಳವಾರ ಸೋಮಹಳ್ಳಿ ಗ್ರಾಮದ ಶ್ರೀ ಗುರುಮಲ್ಲೇಶ್ವರ ಭಿಕ್ಷದ ಮಠದಲ್ಲಿ ಆಚರಿಸಲಾಯಿತು. ಹತ್ತಾರು ವರ್ಷಗಳ ಕಾಲ ಶ್ರೀಮಠದಲ್ಲಿ ಕಂತೆ ಭಿಕ್ಷೆ ಕಾಯಕ ಮಾಡಿದ ಅವರ ಸೇವೆಯನ್ನು ನೆನೆಯುವ ಉದ್ದೇಶದಿಂದ ಧನುರ್ಮಾಸದ ಪ್ರಾರಂಭದ ದಿನದಂದು ಆರಾಧನಾ ಮಹೋತ್ಸವ ಆಚರಿಸಲಾಯಿತು. ವೀರಗಾಸೆ ಕುಣಿತ ಹಾಗು ಮಂಗಳ ವಾದ್ಯಗಳು ಪಾಲ್ಗೊಂಡಿದ್ದವು. ಈ ಸಂದರ್ಭದಲ್ಲಿ ಸೋಮಹಳ್ಳಿ ಗ್ರಾಮಸ್ಥರು, ಯುವಕರು ಹಾಜರಿದ್ದರು.

# ಹೆಚ್‌ಡಿಕೆ ಹುಟ್ಟುಹಬ್ಬ: ಚಾಮರಾಜೇಶ್ವರಸ್ವಾಮಿಗೆ ವಿಶೇಷ ಪೂಜೆ, ಅನ್ನಸಂತರ್ಪಣೆ

ಚಾಮರಾಜನಗರ, ಮಾಜಿ ಮುಖ್ಯಮಂತ್ರಿ ಹಾಗೂ ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವ ಹೆಚ್ .ಡಿ .ಕುಮಾರಸ್ವಾಮಿ ಅವರು 66 ನೇ ಹುಟ್ಟುಹಬ್ಬದ ಅಂಗವಾಗಿ ಜೆಡಿಎಸ್ ಪಕ್ಷದ ಮುಖಂಡರು, ಕಾರ್ಯಕರ್ತರು ಹಾಗೂ ಅಭಿಮಾನಿಗಳು ನಗರದ ಚಾಮರಾಜೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದರು.

ಹೆಚ್.ಡಿ.ಕುಮಾರಸ್ವಾಮಿ ಅವರ ಹೆಸರಿನಲ್ಲಿ ಚಾಮರಾಜೇಶ್ವರಸ್ವಾಮಿಗೆ ಅರ್ಚನೆ ಮಾಡಿಸಿ, ವಿಶೇಷಪೂಜೆ ಸಲ್ಲಿಸಲಾಯಿತು. ಮುಖಂಡ ಅಜಯ್ ಅರಕಲವಾಡಿ ಮಾತನಾಡಿ, ಮಾಜಿ ಮುಖ್ಯಮಂತ್ರಿ ಹಾಗೂ ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವ ಹೆಚ್ ಡಿ ಕುಮಾರಸ್ವಾಮಿ ಅವರು 66 ನೇ ಹುಟ್ಟುಹಬ್ಬದ ಅಂಗವಾಗಿ ಜೆಡಿಎಸ್ ಪಕ್ಷದ ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳು ಹೆಚ್.ಡಿ.ಕುಮಾರಸ್ವಾಮಿ ಅವರ ಹೆಸರಿನಲ್ಲಿ ಅರ್ಚನೆ ಮಾಡಿಸಿ ವಿಶೇಷ ಪೂಜೆ ಸಲ್ಲಿಸುವ ಮೂಲಕ ಅವರ ಹುಟ್ಟುಹಬ್ಬವನ್ನು ಆಚರಿಸಲಾಗಿದೆ ಎಂದರು.

ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ದೀರ್ಘ ಮತ್ತು



ಆರೋಗ್ಯಕರ ಜೀವನ ದಯಪಾಲಿಸಲಿ, ಮತ್ತೆ ಮುಖ್ಯಮಂತ್ರಿ ಯಾಗಲಿ ಎಂದು ಹಾರೈಸಿ ಚಾಮರಾಜೇಶ್ವರಸ್ವಾಮಿಗೆ ವಿಶೇಷಪೂಜೆ ಸಲ್ಲಿಸಲಾಯಿತು ಎಂದರು. ಜೆಡಿಎಸ್ ಜಿಲ್ಲಾ ಉಪಾಧ್ಯಕ್ಷ ಮಹೇಶ್ ಗೌಡ, ಎಲ್ ಐಸಿ ರಾಜು ಪಣ್ಯದಹುಂಡಿ, ಅಜಯ್ ಅರಕಲ ವಾಡಿ, ನಾಗರಾಜು, ಪಾಪಣ್ಣ, ಸುಂದರ್, ಚಿಕ್ಕಣ್ಣ, ಡಿ.ಎನ್. ಉಷಾ, ಸುಬ್ಬಲಕ್ಷ್ಮಮ್ಮ, ರಘುಪತಿ, ಕರ್ನಾ ಟಕ ಸೇನಾಪಡೆ ಅಧ್ಯಕ್ಷ ಶ್ರೀನಿವಾಸಗೌಡ, ಪಣ್ಯದ ಹುಂಡಿ ರಾಜು, ಸೈಯದ್ ಅಕ್ರಂ ಇತರರು ಹಾಜರಿದ್ದರು.

## ಶಾಮನೂರು ಶಿವಶಂಕರಪ್ಪ ನಿಧನ

# ಅಭಿಮಾನಿಗಳು, ಹಿತೈಷಿಗಳಿಂದ ಶ್ರದ್ಧಾಂಜಲಿ

ಚಾಮರಾಜನಗರ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರು, ಮಾಜಿ ಸಚಿವರು ಹಾಗೂ ಹಿರಿಯರಾದ ಡಾ. ಶಾಮನೂರು ಶಿವಶಂಕರಪ್ಪ ಅವರ ನಿಧನದ ಗೌರವಾರ್ಥ ಚಾ.ನಗರದಲ್ಲಿಂದು ಶ್ರದ್ಧಾಂಜಲಿ ಸಲ್ಲಿಸಲಾಯಿತು.

ನಗರದ ಚಾಮರಾಜೇಶ್ವರ ಉದ್ಯಾನವನದ ಮುಂಭಾಗ ದಿ. ಶಾಮನೂರು ಶಿವಶಂಕರಪ್ಪ ಅವರ ಅಭಿಮಾನಿಗಳ ಬಳಗ ಹಾಗು ಹಿತೈಷಿಗಳ ವತಿಯಿಂದ ಶಾಮಿಯಾನ ಹಾಕಿ, ದಿ. ಶಿವಶಂಕರಪ್ಪ ಅವರ ಭಾವಚಿತ್ರವಿಟ್ಟು ಪೂಜೆ ಸಲ್ಲಿಸಿ, ಪುಷ್ಪ ನಮನ ಸಲ್ಲಿಸಲಾಯಿತು.

ಈ ವೇಳೆ ಶಾಮನೂರು ಶಿವಶಂಕರಪ್ಪ ಅವರ ಭಾವಚಿತ್ರಕ್ಕೆ ವೀರಶೈವ ಲಿಂಗಾಯಿತ ಸಮಾಜದ ಹಿರಿಯರು ಪುಷ್ಪ ನಮನ ಸಲ್ಲಿಸಿ ಮಾತನಾಡಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯ ರಾಷ್ಟ್ರೀಯ ಅಧ್ಯಕ್ಷರು ಹಾಗೂ ದಾವಣಗೆರೆ ದಕ್ಷಿಣ ಕ್ಷೇತ್ರದ ಶಾಸಕರಾಗಿದ್ದ ನಮ್ಮ ಸಮಾಜದ ಹಿರಿಯ ಮುಖಂಡರು, ನೇತಾರರು, ಕೊಡುಗೈ ದಾನಿಗಳೆಂದೇ ಖ್ಯಾತಿಯಾಗಿದ್ದ ಡಾ. ಶಾಮನೂರು ಶಿವಶಂಕರಪ್ಪನವರು



ಲಿಂಗೈಕ್ಯರಾಗಿರುವುದು ವೀರಶೈವ ಲಿಂಗಾಯಿತ ಸಮಾಜಕ್ಕೆ ತುಂಬಲಾರದ ನಷ್ಟ ಉಂಟಾಗಿದೆ ಎಂದು ಕಂಬನಿ ಮಿಡಿದರು. ಅವರ ಆದರ್ಶಮಯ ಜೀವನ, ಸಮಾಜ ಸೇವೆ, ಶಿಕ್ಷಣ?ಸಂಘಟನೆಗಳಿಗೆ ನೀಡಿದ ಕೊಡುಗೆ ಅಪಾರ, ಸದಾ ಸ್ಮರಣ ?ಯವಾಗಿರುತ್ತವೆ. ಕೋವಿಡ್ ಸಂದರ್ಭದಲ್ಲಿ ದಾವಣಗೆರೆ ಜಿಲ್ಲೆಯ ಜನರ ಆರೋಗ್ಯ ಬಗ್ಗೆ ಹೆಚ್ಚು ಕಾಳಜಿಯನ್ನು ಹೊಂದಿದ್ದರು. ಸರ್ಕಾರ ಕೋವಿಡ್ ಲಸಿಕೆ ಕೊಡಿಸುವುದು ವಿಳಂಬವಾಗುತ್ತದೆ ಎಂದು ತಮ್ಮ ಸ್ವಂತ ಹಣದಲ್ಲಿ ಸುಮಾರು 7 ಕೋಟಿ ರೂ. ಹೆಚ್ಚು ಹಣವನ್ನು ಪಾವತಿ ಮಾಡಿ, ಖಾಸಗಿಯಾಗಿ ಜಿಲ್ಲೆಯ ಎಲ್ಲಾ ವರ್ಗದ ಜನರಿಗೆ ಕೋವಿಡ್ ಇಂಜೆಕ್ಷನ್ ಕೊಡಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ನೇರ ದಿಟ್ಟವಾಗಿ ಸಮಾಜದ ಕೆಲಸದಲ್ಲಿ ತೊಡಗಿಸಿಕೊಂಡಿದ್ದ ಹಿರಿಯ ಚೇತನ ನಮ್ಮನ್ನು ಬಿಟ್ಟು ಅಗಲಿರುವುದು ನೋವು ತಂದಿದೆ. ಅವರ ಅದರ್ಶಗಳನ್ನು ನಾವೆಲ್ಲರು ಮೈಗೂಡಿಸಿಕೊಂಡು ಸಮಾಜದ ಅಭಿವೃದ್ಧಿಗೆ ಶ್ರಮಿಸೋಣ ಎಂದರು. ಶರಣ ಸಾಹಿತ್ಯ ಪರಿಷತ್ ಪ್ರಧಾನ ಕಾರ್ಯದರ್ಶಿ ಬಿ.ಕೆ. ರವಿಕುಮಾರ್, ಹಿಂದೂ ಜಾಗರಣ ವೇದಿಕೆಯ ಅಧ್ಯಕ್ಷ ಶ್ರೀಕಂಠ, ನಿರ್ದೇಶಕರಾದ ಬಿಸಲವಾಡಿ ಉಮೇಶ್, ಗುರು ಕಾವುದವಾಡಿ, ಮುಖಂಡರಾದ ಬಸವರಾಜು, ಜ್ಯೋತಿಗೌಡನಪುರ ದೊರೆಸ್ವಾಮಿ, ಗುರುಸ್ವಾಮಿ, ಕಾಳಹುಂಡಿ ಕುಮಾರ್,ತೆಳ್ಳನೂರು ಕುಮಾರ್, ಶ್ರೀಕಂಠಸ್ವಾಮಿ, ನಾಗು ರಮೇಶ್, ಹಾಜರಿದ್ದರು

# ‘ಜನನ-ಮರಣ ನಾಗರಿಕ ನೋಂದಣಿ ನಿಖರವಾಗಿ ದಾಖಲಿಸಿ’



**ಮಡಿಕೇರಿ:** ಜನನ ಮತ್ತು ಮರಣ ನಾಗರಿಕ ನೋಂದಣಿ ಪದ್ಧತಿಯನ್ನು ನಿಖರವಾಗಿ ದಾಖಲಿಸುವಂತೆ ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರು ಸೂಚಿಸಿದ್ದಾರೆ.

ನಗರದ ಜಿಲ್ಲಾಧಿಕಾರಿ ಅವರ ಕಚೇರಿ ಸಭಾಂಗಣದಲ್ಲಿ ನಡೆದ ಜನನ ಮತ್ತು ಮರಣ ನಾಗರಿಕ ನೋಂದಣಿ ಪದ್ಧತಿಯ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾಷ್ಟ್ರದ ನಾಗರಿಕ ನೋಂದಣಿ ಜನನ ಮತ್ತು ಮರಣ ಅಧಿನಿಯಮ 1960 ರನ್ವಯ ಕರ್ನಾಟಕ ಜನನ ಮತ್ತು ಮರಣ ನೋಂದಣಿ 1970 ಮತ್ತು ಪುನರ್ ರಚಿತ ಕರ್ನಾಟಕ ಜನನ ಮರಣ ನೋಂದಣಿ ಕಾಯ್ದೆ ನಿಯಮ 1990 ರ ರನ್ವಯ ಜನನ ಮತ್ತು ಮರಣ ನೋಂದಣಿ ಕಡ್ಡಾಯವಾಗಿದ್ದು, ಆ ನಿಟ್ಟಿನಲ್ಲಿ ಕಾಲ ಕಾಲಕ್ಕೆ ಈ ಕಾರ್ಯ ಆಗಬೇಕು ಎಂದು ಸ್ಪಷ್ಟ ನಿರ್ದೇಶನ ನೀಡಿದರು.

ಪ್ರಸ್ತುತ ಜನನ ಮತ್ತು ಮರಣ ನೋಂದಣಿಯನ್ನು ಗ್ರಾಮೀಣ ಭಾಗದಲ್ಲಿ 2015 ರ ಏಪ್ರಿಲ್, 01 ರಿಂದ ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಇ-ಜನ್ಮ ತಂತ್ರಾಂಶದ ಮೂಲಕ ಆನ್‌ಲೈನ್ ನೋಂದಣಿಯನ್ನು ನಿರ್ವಹಿಸಲಾಗುತ್ತಿದ್ದು, ಈ ಕಾರ್ಯದ ಪ್ರಗತಿಯನ್ನು ಸಾಧಿಸುವಂತೆ ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರು ಸೂಚಿಸಿದರು.

ಜನನ ಮತ್ತು ಮರಣ ನೋಂದಣಿ ಸಂಬಂಧಿಸಿದಂತೆ ಆಯಾಯ ಕಾಲದಲ್ಲಿ ಪಡೆಯುವಂತಾಗಲು ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು. ಜನನ ಮತ್ತು ಮರಣ ಪ್ರಮಾಣ ಪತ್ರವನ್ನು ಆಯಾಯ ಕಾಲದಲ್ಲಿಯೇ ಪಡೆದುಕೊಳ್ಳುವಂತಾಗಬೇಕು ಎಂದು ಸಲಹೆ ಮಾಡಿದರು. ಈಗಾಗಲೇ ಜನನ ಮತ್ತು ಮರಣ ನೋಂದಣಿಯನ್ನು ಗ್ರಾ.ಪಂ.ಕಾರ್ಯದರ್ಶಿಯವರನ್ನು ಉಪ ನೋಂದಣಾಧಿಕಾರಿಯಾಗಿ ನೇಮಿಸಲಾಗಿದೆ. ಆ ನಿಟ್ಟಿನಲ್ಲಿ ಗ್ರಾ.ಪಂ.ವ್ಯಾಪ್ತಿಯಲ್ಲಿ 30 ದಿನದೊಳಗೆ ಜನನ ಮತ್ತು ಮರಣ ನೋಂದಣಿ ಮಾಡಬೇಕು. 30 ದಿನದ ನಂತರ ಗ್ರಾಮ ಆಡಳಿತ ಅಧಿಕಾರಿಯನ್ನು ನೋಂದಣಿ ಅಧಿಕಾರಿಯಾಗಿ ನೇಮಿಸಲಾಗಿದ್ದು, ಈ ನೋಂದಣಿಯನ್ನು 30 ದಿನದೊಳಗೆ ಇ-ಜನ್ಮ ತಂತ್ರಾಂಶದಲ್ಲಿ ದಾಖಲು ಮಾಡಬೇಕು ಎಂದರು. ಈಗಾಗಲೇ ದತ್ತು ಮಕ್ಕಳ ಜನನ ಪ್ರಮಾಣ ಪತ್ರವನ್ನು 2022 ರ ಸೆಕ್ಷನ್ 40 ಮತ್ತು 48 ರಂತೆ ತಿದ್ದುಪಡಿ ಮಾಡಲಾಗಿದ್ದು, ಯಾವುದೇ ಏಜೆನ್ಸಿಗಳು ದತ್ತು ಮಕ್ಕಳನ್ನು ಪಡೆಯಲು ಅರ್ಜಿ ಸಲ್ಲಿಸಿ ನೋಂದಣಿ ಮಾಡಿಕೊಂಡು ಜನನ ಪ್ರಮಾಣ ಪತ್ರವನ್ನು ನಿಯಮಾನುಸಾರ ಪಡೆಯಬಹುದಾಗಿದೆ ಎಂದು ಜಿಲ್ಲಾಧಿಕಾರಿ ಅವರು ಹೇಳಿದರು. ಜನನ ಮತ್ತು ಮರಣ ನೋಂದಣಿ ವ್ಯವಸ್ಥೆಯಲ್ಲಿ ಸರಳೀಕರಣಗೊಳಿಸುವ ಮತ್ತು ನಾಗರಿಕ ಸ್ನೇಹಿ ಮಾಡುವಲ್ಲಿ ಮುಂದಾಗಲಾಗಿದ್ದು, ಎಲ್ಲಾ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಯಲ್ಲಿ ಜನಿಸುವ ಮಗುವಿನ ಜನನ ಪ್ರಮಾಣ ಪತ್ರವನ್ನು ಎರಡು ಮೂರು ದಿನದೊಳಗೆ ಪಡೆಯಬಹುದಾಗಿದೆ ಎಂದು ಹೇಳಿದರು. ಸ್ಥಳೀಯ ಸಂಸ್ಥೆ ವ್ಯಾಪ್ತಿಯಲ್ಲಿ ಆರೋಗ್ಯ ಅಧಿಕಾರಿಯವರು ನೋಂದಣಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಲಿದ್ದಾರೆ ಎಂದು ಜಿಲ್ಲಾಧಿಕಾರಿ ಅವರು ಹೇಳಿದರು. ಜಿಲ್ಲಾ ಸಾಂಖ್ಯಿಕ ಇಲಾಖೆಯ ಅಧಿಕಾರಿ ನಾರಾಯಣ ಅವರು ಮಾತನಾಡಿ ಜನನ ಮತ್ತು ಮರಣವನ್ನು ವಿವಿಧ ಹಂತದಲ್ಲಿ ದಾಖಲಿಸಲಾಗುತ್ತದೆ ಎಂದರು.

2025 ರ ಜನವರಿ, 01 ರಿಂದ ನವೆಂಬರ್ ಅಂತ್ಯದ ವರೆಗೆ ಕೊಡಗು ಜಿಲ್ಲೆಯಲ್ಲಿ ಒಟ್ಟು ಗ್ರಾಮೀಣ ಪ್ರದೇಶದಲ್ಲಿ 330 ಮತ್ತು ನಗರ ಪ್ರದೇಶದಲ್ಲಿ 8 ಒಟ್ಟು 338 ನೋಂದಣಿ ಘಟಕಗಳನ್ನು ಆರಂಭಿಸಲಾಗಿದೆ ಎಂದು ಅವರು ಹೇಳಿದರು. ಈ ಅವಧಿಯಲ್ಲಿ 2963 ಗಂಡು, 2907 ಹೆಣ್ಣು ಒಟ್ಟು 5,870 ಮಕ್ಕಳ ಜನನವಾಗಿದೆ. ಹಾಗೆಯೇ ಮರಣ ಪ್ರಮಾಣ 2539 ಗಂಡು, 1734 ಹೆಣ್ಣು ಒಟ್ಟು 4,283 ಮಂದಿ ಮೃತಪಟ್ಟಿದ್ದಾರೆ ಎಂದು ನಾರಾಯಣ ಅವರು ವಿವರಿಸಿದರು.

## 21 ದಿನಗಳೊಳಗೆ ಕಡ್ಡಾಯವಾಗಿ ನೋಂದಣಿ ಮಾಡಿ

ಎಲ್ಲಾ ಸರ್ಕಾರಿ ಆಸ್ಪತ್ರೆಗಳು ಜನನ ಮರಣ ಘಟನೆಗಳನ್ನು ಸಂಭವಿಸಿದ 21 ದಿನಗಳೊಳಗೆ ಕಡ್ಡಾಯವಾಗಿ ನೋಂದಣಿ ಮಾಡಿ ಪ್ರಮಾಣ ಪತ್ರವನ್ನು ವಿತರಿಸುವುದು. ಇದರಿಂದ ಮಗುವಿನ ಜನನ ಪ್ರಮಾಣ ಪತ್ರವು ತಾಯಿಯು ಆಸ್ಪತ್ರೆಯಿಂದ ಬಿಡುಗಡೆ ಹೊಂದುವ ಮೊದಲು ವಿತರಿಸಿದಲ್ಲಿ ಅನುಕೂಲವಾಗಲಿದೆ.

ಎಲ್ಲಾ ಖಾಸಗಿ ಆಸ್ಪತ್ರೆಗಳು ಜನನ ಮರಣ ಘಟನೆಗಳನ್ನು ಎರಡು ಮೂರು ದಿನಗಳೊಳಗೆ ಸಂಬಂಧಿಸಿದ ಜನನ ಮರಣ ನೋಂದಣಾಧಿಕಾರಿಗಳಿಗೆ ವರದಿ ಮಾಡುವುದು. ಕೆಲವು ಖಾಸಗಿ ಆಸ್ಪತ್ರೆಗಳಲ್ಲಿ ಸಂಭವಿಸುವ ಜನನ ಮರಣ ಘಟನೆಗಳನ್ನು ಸಂಬಂಧಪಟ್ಟ ಜನನ ಮರಣ ನೋಂದಣಾಧಿಕಾರಿಗಳಿಗೆ ವರದಿ ಮಾಡಲು ವಿಳಂಬ ಮಾಡುತ್ತಿದ್ದು. ಇದರಿಂದ ಸಾರ್ವಜನಿಕ ಅನಾನುಕೂಲ ಉಂಟಾಗುತ್ತಿದ್ದು. ಸದರಿ ವಿಷಯವನ್ನು ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಐಡಿಸಿಸಿ ಸಭೆಗಳ ಕಾರ್ಯಸೂಚಿ ಅಂಶಗಳಲ್ಲಿ ಸೇರಿಸಿಕೊಳ್ಳುವುದು.

ಎಲ್ಲಾ ಆಸ್ಪತ್ರೆಗಳಲ್ಲಿ ಜನನ ಮರಣ ಘಟನೆಗಳು ಸಂಭವಿಸಿರುವ ಮಾಹಿತಿಯ ಪಟ್ಟಿಯನ್ನು ಇರಿಸುವುದು. ಇದರಿಂದ ಜನನ ಮರಣ ವರದಿಗಳ ಸಂಪೂರ್ಣತೆಯನ್ನು ಮೇಲ್ವಿಚಾರಣೆ ಮಾಡಬಹುದು. ಮತ್ತು ಅನುಸರಣಾ ವರದಿಯನ್ನು ಪಡೆಯಬಹುದು.

ಜನನ ಮರಣ ಪ್ರಮಾಣ ಪತ್ರಗಳ ನೋಂದಣಿ ವಂಚನೆಯ ಚಟುವಟಿಕೆಗಳನ್ನು ತಡೆಗಟ್ಟುವ ಕ್ರಮಗಳಿಗೆ ಸಂಬಂಧಿಸಿದಂತೆ ಜನನ ಮರಣ ನೋಂದಣಾಧಿಕಾರಿಗಳು/ ಉಪ ನೋಂದಣಾಧಿಕಾರಿಗಳು ತಮ್ಮ ಬಳಕೆದಾರರ ಐಡಿ ಪಾಸ್ವರ್ಡ್ ಮತ್ತು ಮೊಬೈಲ್ ಓಟಿಪಿ ಗಳನ್ನು ಹಂಚಿಕೊಳ್ಳದಂತೆ ಮತ್ತು ಆಗಾಗ್ಗೆ ಪಾಸ್ ವರ್ಡ್ ಬದಲಾಯಿಸುವ ಅಗತ್ಯತೆಯ ಬಗ್ಗೆ ಎಲ್ಲಾ ಜನನ ಮರಣ ನೋಂದಣಾಧಿಕಾರಿಗಳಿಗೆ ನಿರ್ದೇಶನ ನೀಡುವುದು.

ಕೈಬರಹದ ಜನನ ಮರಣ ಪ್ರಮಾಣ ಪತ್ರಗಳನ್ನು ಡಿಜಿಟಲೀಕರಣಗೊಳಿಸುವ ಮೊದಲ ಜನನ ಮರಣ ನೋಂದಣಾಧಿಕಾರಿಗಳಿಂದ ಕೈಬರಹದ ಜನನ ಮರಣ ಪ್ರಮಾಣ ಪತ್ರಗಳ ದೃಢೀಕರಣವನ್ನು ಪರಿಶೀಲಿಸಿ ಮುಂದಿನ ಕ್ರಮವಹಿಸಲು ಸೂಚಿಸಿರುತ್ತಾರೆ. ಇದಲ್ಲದೇ ಸಾರ್ವಜನಿಕ ಫಿಶಿಂಗ್ ಸೈಟ್‌ಗಳ (ನಕಲಿ ಜಾಲತಾಣಗಳು) ಬಗ್ಗೆ ಅರಿವು ಮೂಡಿಸುವ ಹಾಗೂ ಈ ಸಂಬಂಧ ಭಾರತದ ಮಹಾ ನೋಂದಣಾಧಿಕಾರಿಗಳು ಹೊರಡಿಸುವ ಮಾರ್ಗಸೂಚಿಗಳನ್ನು ಕಟ್ಟನಿಟ್ಟಾಗಿ ಪಾಲಿಸುವುದು.

ಸರ್ಕಾರಿ ಅಥವಾ ಖಾಸಗಿ ಆಸ್ಪತ್ರೆಗಳು ವೈದ್ಯಕೀಯವಾಗಿ ಪ್ರಮಾಣೀಕರಿಸಿದ ಮರಣ ಕಾರಣ ಪ್ರಮಾಣ ಪತ್ರಗಳನ್ನು (ಎಂಸಿಸಿಡಿ) ಜನನ ಮರಣ ಮುಖ್ಯ ನೋಂದಣಾಧಿಕಾರಿಗಳ ಕಛೇರಿಗೆ ಹಾಗೂ ಒಂದು ಪ್ರತಿಯನ್ನು ಮೃತರ ಸಂಬಂಧಿಕರಿಗೆ ಒದಗಿಸುವುದನ್ನು 1969 ರ ಜನನ ಮರಣ ನೋಂದಣಿ ತಿದ್ದುಪಡಿ ಅಧಿನಿಯಮ 2023 ರ ಸೆಕ್ಷನ್ 10 ರಲ್ಲಿ ಕಡ್ಡಾಯಗೊಳಿಸಲಾಗಿದೆ.

ಸರ್ಕಾರಿ ಆಸ್ಪತ್ರೆಗಳಲ್ಲಿ ಜನನ ಮರಣ ಉಪ ನೋಂದಣಿ ಘಟಕವನ್ನು ಸ್ಥಾಪಿಸಿ ಈ ಸಂಸ್ಥೆಗಳಲ್ಲಿ ಸಂಭವಿಸುವ ಜನನ ಮತ್ತು ಮರಣ ಘಟನೆಗಳನ್ನು ನೋಂದಣಿ ಮಾಡಿ, ಅರ್ಜಿದಾರರಿಗೆ ನಿಗದಿತ ಸಮಯದಲ್ಲಿ ಪ್ರಮಾಣ ಪತ್ರಗಳನ್ನು ವಿತರಿಸಲು ಕ್ರಮವಹಿಸಲಾಗಿದೆ ಎಂದರು.

ಖಾಸಗಿ ಆಸ್ಪತ್ರೆಗಳಲ್ಲಿ ಸಂಭವಿಸುವ ಘಟನೆಗಳನ್ನು 21 ದಿನದೊಳಗೆ ನೋಂದಣಿ ಮಾಡಲು ಅನುಕೂಲವಾಗುವಂತೆ ಸಂಬಂಧಿಸಿದ ಜನನ ಮತ್ತು ಮರಣ ನೋಂದಣಾಧಿಕಾರಿಗಳಿಗೆ ವರದಿ ಮಾಡಲು ತಿಳಿಸಲಾಗಿದೆ ಎಂದು ನಾರಾಯಣ ಅವರು ಹೇಳಿದರು.

ಉಪ ವಿಭಾಗಾಧಿಕಾರಿ ನಿತಿನ್ ಚಕ್ಕಿ, ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ಚಂದ್ರಶೇಖರ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕರಾದ ಪ್ರಸನ್ನ ಕುಮಾರ್, ತೋಟಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕರಾದ ಮುತ್ತಪ್ಪ, ಕುಶಾಲನಗರ ಪುರಸಭೆ ಮುಖ್ಯಾಧಿಕಾರಿ ಗಿರೀಶ್, ಸಹಾಯಕ ಸಾಂಖ್ಯಿಕ ಅಧಿಕಾರಿ ಟಿ.ವೆಂಕಟೇಶ್, ಬಿ.ಎಂ.ಗಾನವಿ, ಇತರರು ಇದ್ದರು.

# ಗ್ರಾಮಮಟ್ಟದಿಂದ ಪ್ರಾಮಾಣಿಕ ಕಾಂಗ್ರೆಸ್ ಸಂಘಟಿಸುವೆ: ಪಶುಪತಿ ತೇಜೋಮೂರ್ತಿ



**ಕೆ.ಆರ್.ನಗರ:** ಕಾಂಗ್ರೆಸ್ ಪಕ್ಷವನ್ನು ಗ್ರಾಮಮಟ್ಟದಿಂದ ಸಂಘಟಿಸುವ ಪ್ರಾಮಾಣಿಕ ಕೆಲಸವನ್ನು ಮಾಡಲಾಗುವುದು ಎಂದು ಬ್ಲಾಕ್ ಕಾಂಗ್ರೆಸ್ ಸಹಕಾರ ವಿಭಾಗದ ನೂತನ ಅಧ್ಯಕ್ಷ ಪಶುಪತಿ ತೇಜೋಮೂರ್ತಿ ಹೇಳಿದರು.

ಅವರು ಶಾಸಕ ಡಿ.ರವಿಶಂಕರ್ ಹಾಗೂ ಕೆಪಿಸಿಸಿ ಸದಸ್ಯ ಸಿ.ಪಿ.ರಮೇಶ್ ಕುಮಾರ್ ಅವರನ್ನು ಅಭಿನಂದಿಸಿ ಮಾತನಾಡಿದರು.

ಸಹಕಾರ ವಿಭಾಗದಲ್ಲಿ ಕಾಂಗ್ರೆಸ್ ಪಕ್ಷವನ್ನು ಗಟ್ಟಿಯಾಗಿ ಕಟ್ಟುವ ಕೆಲಸವನ್ನು ಪಕ್ಷದ ಹಿರಿಯ ನಾಯಕರುಗಳ ಮಾರ್ಗದರ್ಶನ, ಸಲಹೆ ಸೂಚನೆಗಳಂತೆ ಮಾಡಲಾಗುವುದು ಎಂದರು.

ಬ್ಲಾಕ್ ಕಾಂಗ್ರೆಸ್ ಸಹಕಾರ ವಿಭಾಗದ ಅಧ್ಯಕ್ಷರನ್ನಾಗಿ ನನ್ನನ್ನು ನೇಮಕಮಾಡಲು ಪ್ರಮುಖ ಕಾರಣಕರ್ತರಾದ ಶಾಸಕ ಡಿ.ರವಿಶಂಕರ್, ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕ ದೊಡ್ಡಸ್ವಾಮೇಗೌಡ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್, ಸಹಕಾರ ವಿಭಾಗದ ಜಿಲ್ಲಾಧ್ಯಕ್ಷ ಸಿದ್ದಯ್ಯ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಉದಯಶಂಕರ್ ಹಾಗೂ ಪಕ್ಷದ ಹಿರಿಯ ಮುಖಂಡರುಗಳಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಎಂದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಸಹಕಾರ ವಿಭಾಗದ ಜಿಲ್ಲಾ ಕಾರ್ಯದರ್ಶಿ ನಿಜಗನಹಳ್ಳಿ ಶಂಕರಪ್ಪ, ಎಪಿಎಂಸಿ ಮಾಜಿ ಅಧ್ಯಕ್ಷ ಕೆಡಗ ನಟರಾಜ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸದಸ್ಯ ಪಶುಪತಿ ರವಿ, ಮುಖಂಡರುಗಳಾದ ಹೊನ್ನೇನಹಳ್ಳಿ ಗಿರೀಶ್, ಗಾಯನಹಳ್ಳಿ ಕುಮಾರಸ್ವಾಮಿ, ಹರೀಶ್ ಸೇರಿದಂತೆ ಹಲವರು ಇದ್ದರು.

## ವಿರಾಜಪೇಟೆ ಉಪ ಖಜಾನೆಯ ಕಚೇರಿ ಸ್ಥಳಾಂತರ

ಮಡಿಕೇರಿ: ವಿರಾಜಪೇಟೆ ಉಪ ಖಜಾನೆಯ ನೂತನ ಕಚೇರಿಯು ವಿರಾಜಪೇಟೆ ತಾಲ್ಲೂಕು ಆಡಳಿತ ಸೌಧದಲ್ಲಿ ನಿರ್ಮಾಣಗೊಂಡಿದ್ದು, ಖಜಾನೆ ಆಯುಕ್ತರ ಅನುಮತಿ ನೀಡಿರುವ ಮೇರೆಗೆ ಈ ಉಪ ಖಜಾನೆಯು ಹಾಲಿ ಕಾರ್ಯನಿರ್ವಹಿಸುತ್ತಿರುವ ಬಾಡಿಗೆ ಕಟ್ಟಡದಿಂದ ವಿರಾಜಪೇಟೆ ತಾಲ್ಲೂಕು ಆಡಳಿತ ಸೌಧದ ನೆಲ ಮಹಡಿಯಲ್ಲಿರುವ ನೂತನ ಕಚೇರಿಗೆ ಡಿಸೆಂಬರ್, 12 ರಂದು ಸ್ಥಳಾಂತರಗೊಂಡು ಕಚೇರಿ ಕಾರ್ಯ ಚಟುವಟಿಕೆಗಳು ಪ್ರಾರಂಭಗೊಂಡಿರುತ್ತದೆ ಎಂದು ವಿರಾಜಪೇಟೆ ಉಪ ಖಜಾನೆಯ ಪತ್ರಾಂಕಿತ ಉಪ ಖಜಾನಾಧಿಕಾರಿ ಅವರು ತಿಳಿಸಿದ್ದಾರೆ.

ಉಪ ಖಜಾನೆಗೆ ಸಂಬಂಧಿಸಿದ ಎಲ್ಲಾ ಪತ್ರ ವ್ಯವಹಾರಗಳು ಹಾಗೂ ಖಜಾನೆ ಕೆಲಸ ಕಾರ್ಯಗಳಿಗೆ ಸಂಬಂಧಿಸಿದಂತೆ ಪತ್ರಾಂಕಿತ ಉಪ ಖಜಾನಾಧಿಕಾರಿಗಳು, ಉಪ ಖಜಾನೆ ಕಚೇರಿ, ನೆಲ ಮಹಡಿ,

ತಾಲ್ಲೂಕು ಆಡಳಿತ ಸೌಧ, ವಿರಾಜಪೇಟೆ-571218. ವಿಳಾಸದ ವಿವರವುಳ್ಳ ನೂತನ ಕಚೇರಿಯನ್ನು ಸಂಪರ್ಕಿಸುವಂತೆ ವಿರಾಜಪೇಟೆ ಉಪ ಖಜಾನೆ ಪತ್ರಾಂಕಿತ ಉಪ ಖಜಾನಾಧಿಕಾರಿ ಅವರು ತಿಳಿಸಿದ್ದಾರೆ.

# ಗೌರವಾದರ ಹಾಗೂ ವ್ಯಕ್ತಿತ್ವದ ಘನತೆ

ಏನು ಮಾಡೋದು ಗೊತ್ತಾಗುತ್ತಿಲ್ಲ ಎಲ್ಲಾ ಗಣ್ಯರನ್ನು ಸಮಾಧಾನಪಡಿಸಿ ಅವರಿಗೆ ಸೂಕ್ತ ಸ್ಥಾನಮಾನಗಳನ್ನು ಗೌರವಾದರಗಳನ್ನು ಸಲ್ಲಿಸುವಲ್ಲಿ ಏನೋ ಒಂದು ಎಡವಟ್ಟು ಆಗಿಯೇ ಬಿಟ್ಟಿರುತ್ತದೆ ಏಕೆಂದರೆ ಇದು ನಮ್ಮೊಬ್ಬರ ಕಾರ್ಯಕ್ರಮವಲ್ಲ ಸಾಮೂಹಿಕವಾಗಿ ಮಾಡುವ ಕಾರ್ಯಕ್ರಮಗಳಲ್ಲಿ ಸರ್ಕಾರದ ಪ್ರೋಟೋಕಾಲ್ ಇರದೇ ಹೋದರೂ ಕೂಡ ಕೆಲವೊಮ್ಮೆ ಅವಘಡಗಳು ಆಗುವುದು ಉಂಟು ಎಂದು ತುಸು ಬೇಸರದಿಂದಲೇ ಅದೊಂದು ಜಿಲ್ಲಾ ಮಟ್ಟದ ಕಾರ್ಯಕ್ರಮವನ್ನು ಆಯೋಜಿಸುತ್ತಿದ್ದ ಸಮಿತಿಯ ಸದಸ್ಯರು ಹೇಳಿದರು. ಇದನ್ನು ಕೇಳಿದ ನನಗೆ ನೆನಪಾದದ್ದು ಕೆಳಗಿನ ಈ ಘಟನೆ.

ಅದೊಂದು ತಣ್ಣಗಿನ ಮುಂಜಾವಿನ ಸಮಯ. ಕೂನೂರಿನ ಮಿಲಿಟರಿ ಆಸ್ಪತ್ರೆಯ ಒಳಗೆ ಅತ್ಯಂತ ಸಾಮಾನ್ಯ ನಾಗರಿಕರಂತೆ ಭಾರತ ದೇಶದ ಅಂದಿನ ರಾಷ್ಟ್ರಪತಿ ಡಾ. ಎ ಪಿ ಜೆ ಅಬ್ದುಲ್ ಕಲಾಂ ಪ್ರವೇಶಿಸಿದರು. ಅವರು ಬರುತ್ತಿದ್ದಾರೆ ಎಂಬ ಸುಳಿವು ಯಾವ ಮಾಧ್ಯಮ ಮಿತ್ರರಿಗೂ ಇರಲಿಲ್ಲ ಅಲ್ಲಿ ಫೋಟೋಗ್ರಾಫರ್ಗಳಾಗಲಿ ಪತ್ರಿಕೆ ಹಾಗೂ ಟಿವಿ ಮಾಧ್ಯಮದವರಾಗಲಿ ಇರಲಿಲ್ಲ. ಜನಸಂದಣಿಯಂತೂ ಇರಲೇ ಇಲ್ಲ.

ಈ ಹಿಂದೆ 1971ರ ಭಾರತ ದೇಶದ ಬಾಂಗ್ಲಾದೇಶವನ್ನು ಉಳಿಸುವ ನಿಟ್ಟಿನಲ್ಲಿ ನಡೆದ ಯುದ್ಧದಲ್ಲಿ ಅದ್ವಿತೀಯ ಧೈರ್ಯ ಮತ್ತು ಸಾಹಸಗಳಿಂದ ಭಾರತದ ಸೈನ್ಯವನ್ನು ಮುನ್ನಡೆಸಿ ಭಾರತಾಂಬೆಯ ಕೊರಳಿಗೆ ವಿಜಯದ ಮಾಲೆಯನ್ನು ತೊಡಿಸುವಲ್ಲಿ ಯಶಸ್ವಿಯಾದ ಫೀಲ್ಡ್ ಮಾರ್ಷಲ್ ಸ್ಯಾಮ್ ಮಾನೆಕ್ ಶಾ ಅವರು ಅಲ್ಲಿ ಚಿಕಿತ್ಸೆಗಾಗಿ ದಾಖಲಾಗಿದ್ದರು.

ಅತ್ಯಂತ ನಿಸ್ತೇಜ ಸ್ಥಿತಿಯಲ್ಲಿದ್ದರೂ ಕೂಡ ತಮ್ಮ ಸ್ವಾಭಾವಿಕವಾದ ಮಿಲಿಟರಿ ಗತ್ತನ್ನು ಹಾಗೂ ಶಿಸ್ತನ್ನು ಹೊಂದಿದ್ದ ಮಾನೆಕ್ ಶಾ ಅವರ ಕೋಣೆಗೆ ಪ್ರವೇಶಿಸಿದ ರಾಷ್ಟ್ರಪತಿಯವರು ಕುಶಲೋಪರಿಯನ್ನು ವಿಚಾರಿಸಿದ ನಂತರ "ನಿಮಗೆ ಇಲ್ಲಿ ಎಲ್ಲ ವ್ಯವಸ್ಥೆಗಳು ಸರಿಯಾಗಿವೆಯೇ? ನಿಮಗೆ ಯಾವುದೇ ತೊಂದರೆ ಆಗುತ್ತಿಲ್ಲ ತಾನೆ?ಹಾಗೆ ಏನಾದರೂ ತೊಂದರೆ ಆದರೆ ನನಗೆ ಹೇಳಿ ನಾನು ಸರಿಪಡಿಸುತ್ತೇನೆ" ಎಂದು ಅತ್ಯಂತ ಆತ್ಮೀಯತೆಯಿಂದ ಕೇಳಿದರು.

ಪ್ರಯಾಸದಿಂದ ನಸುನಕ್ಕ ಸ್ಯಾಮ್ "ನಿಜ! ನನಗೆ ಒಂದು ದೂರು ಇದೆ" ಎಂದು ಹೇಳಲು ರಾಷ್ಟ್ರಪತಿ ಅಬ್ದುಲ್ ಕಲಾಂ ಅವರು ಸ್ಯಾಮ್ ಅವರ ಬಳಿ ಮತ್ತಷ್ಟು ಬಾಗಿ ಹೇಳಿ ನಿಮಗಾಗಿರುವ ತೊಂದರೆ ಏನು ಎಂದು? ಎಂದು ಕೇಳಿದರು.

ತಮ್ಮ ಅದ್ಭುತವಾದ ಮಾತಿನ ಶೈಲಿ ಹಾಗೂ ಗತ್ತಿನಿಂದಲೇ ಪ್ರಸಿದ್ಧರಾಗಿದ್ದ ಸ್ಯಾಮ್ ನನ್ನ ದೇಶದ ಅತ್ಯಂತ ಗೌರವಾನ್ವಿತ ರಾಷ್ಟ್ರಪತಿ ಹುದ್ದೆಯಲ್ಲಿರುವ ಡಾಕ್ಟರ್ ಎಪಿಜೆ ಅಬ್ದುಲ್ ಕಲಾಂ ಅವರು ನನ್ನನ್ನು ನೋಡಲು ಬಂದಿದ್ದು ನನ್ನ ಎದುರಿಗೆ ನಿಂತಿದ್ದಾರೆ ... ಆದರೆ ನಾನು ಅವರಿಗೆ ಎದ್ದುನಿಂತು ನನ್ನ ಮಿಲಿಟರಿ ಸೆಲ್ಯೂಟ್ ನೀಡಲು ಸಾಧ್ಯವಾಗದ ಸ್ಥಿತಿಯಲ್ಲಿ ಇದ್ದೇನೆ" ಎಂದು ಹೇಳಿದರು.

ಒಂದೆರಡು ಕ್ಷಣ ಅಲ್ಲಿ ಮೌನ ತಾಂಡವವಾಡಿತು. ನಂತರ ಸ್ಯಾಮ್ ಅವರ ಕೈಗಳನ್ನು ಗಟ್ಟಿಯಾಗಿ ಹಿಡಿದುಕೊಂಡ ರಾಷ್ಟ್ರಪತಿಯವರ ಕಣ್ಣಲ್ಲಿ ನೀರು ತುಂಬಿತ್ತು.ಅವರಿಬ್ಬರ ನಡುವೆ ಮೌನ ತಾಂಡವವಾಡಿದರೂ ಪರಸ್ಪರ ಹಿಡಿದ ಕೈಗಳು ಇನ್ನಿಲ್ಲದ ಆತ್ಮೀಯತೆ ಮತ್ತು ಗೌರವವನ್ನು ತೋರ್ಪಡಿಸಿದರೆ ಅವರ ಭಾವಗಳು ಅವರ ಮನದ ಮಾತುಗಳನ್ನು ಹೇಳದೆಯೂ ಹೊಮ್ಮಿಸಿದವು. ಯಾವುದೇ ಅಧಿಕಾರ, ಹುದ್ದೆಗಳ ಹಂಗಿಲ್ಲದ ಎರಡು ದೈತ್ಯ ವ್ಯಕ್ತಿಗಳ ಮಿಲನಕ್ಕೆ ಸಾಕ್ಷಿಯಾಗಿದ್ದವರ ಕಣ್ಣುಗಳಲ್ಲಿ ನೀರಿದ್ದರೂ ಎದೆಯಲ್ಲಿ ಅಭಿಮಾನ ಹೆಪ್ಪುಗಟ್ಟಿತ್ತು.

ಕೆಲ ಸಮಯದ ನಂತರ ಕಲಾಮ್ ಅವರು ಅಲ್ಲಿಂದ ಹೊರಟು ನಿಂತಾಗ ಸ್ಯಾಮ್ ತಾವು ನಿವೃತ್ತಿ ಹೊಂದಿದ ನಂತರ ತಮಗೆ ತಲುಪದೇ ಇರುವ ತಮ್ಮ ಪಿಂಚಣಿ ಹಣವನ್ನು ಶೀಘ್ರ ದೊರಕಿಸಿ ಕೊಡುವಂತೆ ಕೇಳಿಕೊಂಡರು.



ಕಲಾಮ್ ಅವರ ಆದೇಶದ ಮೇರೆಗೆ ಮುಂದಿನ ಒಂದೇ ವಾರದಲ್ಲಿ ವೆಲಿಂಗ್ಟನ್‌ನ ಮಿಲಿಟರಿ ಆಸ್ಪತ್ರೆಗೆ ಭೇಟಿ ನೀಡಿದ ರಕ್ಷಣಾ ಕಾರ್ಯದರ್ಶಿಯು ಫೀಲ್ಡ್ ಮಾರ್ಷಲ್ ಸ್ಯಾಮ್ ಸುಮಾರು ಒಂದು ಕೋಟಿ 30 ಲಕ್ಷ ರೂ ಹಣದ ಚೆಕ್ಕನ್ನು ಸ್ಯಾಮ್ ಬಹದ್ದೂರ ಅವರಿಗೆ ಹಸ್ತಾಂತರಿಸಿದರು.


ಕಥೆ ಇಲ್ಲಿಗೆ ಮುಗಿಯಲಿಲ್ಲ ಸ್ನೇಹಿತರೆ... ಇಬ್ಬರು ಮಹಾನ್ ವ್ಯಕ್ತಿಗಳ ಭೇಟಿಯ ಪರಿಣಾಮವಾಗಿ ನಿಂತು ಹೋದ ತಮ್ಮ ಪಿಂಚಣಿ ಹಣದ ಮೊತ್ತವನ್ನು ಪಡೆದ ಫೀಲ್ಡ್ ಮಾರ್ಷಲ್ ಅದನ್ನು ಸೇನೆಯ ಪರಿಹಾರ ನಿಧಿಗೆ ಅರ್ಪಿಸಿದರು. ನಿಜವಾದ ನಾಯಕರು ಗೌರವವನ್ನು ನೀಡಿ ಎಂದು ಬೇಡಿಕೊಳ್ಳುವುದಿಲ್ಲ ಅವರು ತಮ್ಮ ಗೌರವವನ್ನು ತಮ್ಮ ನಡವಳಿಕೆಯಿಂದ ವ್ಯಕ್ತಿತ್ವದಿಂದ ಹಾಗೂ ಘನತೆಯಿಂದ ತಾವೇ ಸಂಪಾದಿಸಿಕೊಳ್ಳುತ್ತಾರೆ.

ಸ್ನೇಹಿತರೆ, ಇಂತಹದ್ದೇ ಘಟನೆಗಳು ಸಾಮಾನ್ಯರ ಬದುಕಿನಲ್ಲಿ ನಡೆದಿರುತ್ತವೆ.ಬದುಕಿನಲ್ಲಿ ಎಷ್ಟೋ ಬಾರಿ ನಾವು ಮದುವೆ ಮುಂಜಿಗಳಿಗೆ ಹೋದಾಗ, ಸಾರ್ವಜನಿಕ ಸಮಾರಂಭಗಳಲ್ಲಿ ಹೋದಾಗ ಅಲ್ಲಿ ನಮಗೆ ನೀಡುವ ಉಡುಗೊರೆ, ಗೌರವ, ಸತ್ಕಾರಗಳಲ್ಲಿ ವ್ಯತ್ಯಾಸವಾದರೆ ಅಪಮಾನವಾಯಿತು ಎಂದು ಭಾವಿಸುತ್ತೇವೆ. ಕೂಗಾಡಲೂಬಹುದು, ಕೆಲವರು ಮೌನವಾಗಿ ಉಳಿದರೆ ಮತ್ತೆ ಕೆಲವರು ಮಾತಾಡಿ ತಮಗಾದ ನೋವನ್ನು ವ್ಯಕ್ತಪಡಿಸಬಹುದು. ಮತ್ತೆ ಕೆಲವರು ಮತ್ತೊಂದು ಕಾರ್ಯಕ್ರಮದಲ್ಲಿ ತಮಗೆ ಆ ಸ್ಥಿತಿಯನ್ನು ತಂದಂತಹ ವ್ಯಕ್ತಿಗೆ ಅದೇ ರೀತಿಯ ವರ್ತನೆಯ ಮೂಲಕ ಸೇಡು ತೀರಿಸಿಕೊಳ್ಳಬಹುದು. ಎಲ್ಲವೂ ಅವರವರ ವ್ಯಕ್ತಿತ್ವಕ್ಕೆ ಸಂಬಂಧಪಟ್ಟದ್ದು.

ಎಷ್ಟೋ ಬಾರಿ ಸರ್ಕಾರದ ಕಾರ್ಯಕ್ರಮಗಳಲ್ಲಿ ಅಧಿಕಾರಿಗಳ ಕಣ್ತಪ್ಪಿನಿಂದ, ಇಲ್ಲವೇ ಆಡಳಿತಾರೂಢ ಪಕ್ಷದ ಒತ್ತಾಸೆಯಿಂದ ಮತ್ತೆ ಕೆಲವೊಮ್ಮೆ ಅಧಿಕವಾದ ಅತಿಥಿಗಳ ಪಟ್ಟಿಯಿಂದ ಕೆಲವರ ಹೆಸರುಗಳು ಬಿಟ್ಟು ಹೋಗಬಹುದು, ಕೆಲವೊಮ್ಮೆ ಅವಶ್ಯಕತೆ ಇದ್ದಷ್ಟು ಹಣಕಾಸಿನ ವ್ಯವಸ್ಥೆ ಆಗದೆ ಇರುವ ಕಾರಣ ಕೂಡ ಕೆಲ ಹೆಸರುಗಳನ್ನು ಬಿಟ್ಟುಬಿಡಬಹುದು. ಮತ್ತೆ ಕೆಲವೊಮ್ಮೆ ಉದ್ದೇಶಪೂರ್ವಕವಾಗಿಯೂ ಆಗಬಹುದು. ಇಂತಹ ಸಮಯದಲ್ಲಿ ಕೆಲ ಜನ ಗಣ್ಯ ವ್ಯಕ್ತಿಗಳು ಹಾಗೂ ಅವರ ಬೆಂಬಲಿಗರು ತಮಗೆ/ ತಮ್ಮ ನಾಯಕರಿಗೆ ಅವಮಾನವಾಯಿತು ಎಂದು ಹುಯಿಲೆಬ್ಬಿಸಿ ಕಾರ್ಯಕ್ರಮದ ಗೌರವ, ಘನತೆಯನ್ನು ಪಣಕ್ಕಿಟ್ಟು ಕ್ಷಮೆ ಯಾಚಿಸಲು ಕಾರ್ಯಕ್ರಮವನ್ನು ನಿಷೇಧಿಸಲು ಹಠ ಹಿಡಿಯುತ್ತಾರೆ.

ಮತ್ತೆ ಕೆಲವು ಗಣ್ಯ ವ್ಯಕ್ತಿಗಳು ತಮ್ಮ ವಯೋ ಸಹಜ ತೊಂದರೆಗಳ ಕಾರಣದಿಂದ ಇದೇ ರೀತಿಯ ಅನುಕೂಲಗಳು ಬೇಕು ಎಂಬ ಕಾರಣವನ್ನು ಒಡ್ಡಿ ಬೇಡಿಕೆಗಳನ್ನು ಇಡಬಹುದು ಆದರೆ ಅದನ್ನು ಪೂರೈಸಲು ಆಯೋಜಕರಿಗೆ ಸಾಧ್ಯವಾಗದೆ ಹೋಗುವ ಪರಿಸ್ಥಿತಿಯು ಉಂಟು. ಮತ್ತೆ ಕೆಲವೊಮ್ಮೆ ಉದಯೋನ್ಮುಖ ಗಣ್ಯ ವ್ಯಕ್ತಿಗಳು ಅವಕಾಶಕ್ಕಾಗಿ ಇನ್ನಿಲ್ಲದ ರಾಜಿಗಳನ್ನು ಮಾಡಿಕೊಳ್ಳುವುದೂ ಉಂಟು. ಈ ಎರಡು ಸಂದರ್ಭಗಳು ಕೂಡ ಕಾರ್ಯಕ್ರಮಗಳನ್ನು ಆಯೋಜನೆ ಮಾಡುವ ವ್ಯಕ್ತಿಗಳಿಗೆ ಪರಮ ಮುಜುಗರವನ್ನು ತರುವಂತಹವೇ. ಒಂದೆಡೆ ನಿಷ್ಠುರವಾಗಿ ಇರುವ ವಿಷಯವನ್ನು ಹೇಳಲು ಸಾಧ್ಯವಾಗದ ಪರಿಸ್ಥಿತಿ ಇದ್ದರೆ ಮತ್ತೊಂದೆಡೆ ಅದನ್ನು ಅರ್ಥಮಾಡಿಕೊಳ್ಳದೆ ಹೋಗುವವರ ಸಂಖ್ಯೆ ಹೆಚ್ಚಾಗುತ್ತಾ ಹೋಗುತ್ತದೆ.

ಮತ್ತೆ ಕೆಲ ಜನರು ಆಹ್ವಾನ ಪತ್ರಿಕೆಗಳಲ್ಲಿ ಗಣ್ಯ ವ್ಯಕ್ತಿಗಳ ಹೆಸರನ್ನು ಹಾಕಿರುತ್ತಾರೆಯೇ ಹೊರತು ಅವರನ್ನು ಕರೆದಿರುವುದಿಲ್ಲ.... ಇದು ಒಂದು ರೀತಿಯ ತಂತ್ರವೇ ಸರಿ. ಕಾರ್ಯಕ್ರಮ ಯಾವುದೇ ಇರಲಿ ಸಮಯ, ಸಂದರ್ಭ, ಉಚಿತ ಮತ್ತು ಅನುಚಿತತೆಗಳ ಕುರಿತು ಅರಿವನ್ನು ಇಟ್ಟುಕೊಂಡು ಸಾಧ್ಯವಾದರೆ ಅನುಸರಿಸಿ ನಡೆಯುವ ಹಾಗೂ ಬೇಡವಾದರೆ ಮೌನವಾಗಿ ದೂರ ಸರಿಯುವ ಎಲ್ಲಾ ಹಕ್ಕು ಮತ್ತು ಬಾಧ್ಯತೆಗಳು ನಮ್ಮದಾಗಿದ್ದು ಅದನ್ನು ಪಾಲಿಸೋಣ. 'ಏನಂತೀರಾ?





ವೀಣಾ ಹೇಮಂತ್ ಗೌಡ ಪಾಟೀಲ್
ಮುಂಡರಗಿ ಗದಗ್

# ಅರ್ಚಕನ ಬೆಲೆ

ಒಂದು ದಿನ ಒಂದು ಕೋರ್ಟಿನಲ್ಲಿ ಜಡ್ಜ್ ಮುಂದೆ ಒಂದು ಕೇಸ್ ಬಂದಿತ್ತು. ಒಬ್ಬ ಫಿರ್ಯಾದಿ ತಂದ ಕೇಸ್ ಹೀಗಿತ್ತು.

ಒಬ್ಬ ಮಾಮೂಲಿ ಅರ್ಚಕ, ದೇವಸ್ಥಾನದಲ್ಲಿ ಮಂಗಳಾರತಿ ತಟ್ಟೆಯ ಪುಡಿಗಾಸಿನಿಂದ ಬದುಕುವವನು, ಸರ್ಕಾರಕ್ಕೆ ಯಾವುದೇ ತೆರಿಗೆ ಕಟ್ಟದೇ ಕೆಲವೇ ಸಮಯದಲ್ಲಿ ಶ್ರೀಮಂತನಾದ ಎಂದರೆ ಅವನು ಅಕ್ರಮ ರೀತಿಯಲ್ಲಿ ಧನಸಂಪಾದನೆ ಮಾಡಿರಬೇಕು. ಆದ್ದರಿಂದ ಆ ಅರ್ಚಕನ ಅಕ್ರಮ ಸಂಪಾದನೆಯ ಬಗ್ಗೆ ವಿಚಾರಣೆ ನಡೆಸಿ ಸೂಕ್ತ ಶಿಕ್ಷೆ ವಿಧಿಸಬೇಕೆಂದು ಪ್ರಾರ್ಥನೆ.'

ಜಡ್ಜ್ ಮೊದಲು ಆ ಅರ್ಚಕನನ್ನು ಪ್ರಶ್ನೆ ಮಾಡಿದರು

"ನಿಮ್ಮ ಮೇಲೆ ಅಕ್ರಮ ಧನ ಸಂಪಾದನೆಯ ಆರೋಪವಿದೆ. ನಿಮ್ಮ ಸಂಪಾದನೆ ಸಕ್ರಮವೋ ಅಕ್ರಮವೋ ಸ್ಪಷ್ಟ ಪಡಿಸಿ"

ಅರ್ಚಕರು ಹೇಳಿದರು " ಅಯ್ಯಾ, ನನ್ನ ಬಳಿಯಿರುವ ಧನವೆಲ್ಲಾ ಸಕ್ರಮವಾಗಿ ನನಗೆ ಬಂದಿದ್ದು".

ಜಡ್ಜ್ ಸವಾಲು ಹಾಕಿದರು " ಸಾಧಾರಣ ಅರ್ಚಕವೃತ್ತಿಯಿಂದ ಬದುಕುತ್ತಿರುವ ನೀವು ಗಳಿಸಿದ್ದೆಲ್ಲಾ ಸಕ್ರಮವಾಗಿ ಎಂದು ಹೇಗೆ ನಂಬುವುದು?"

ಅರ್ಚಕರು ಹೇಳುತ್ತಾರೆ"ಅಯ್ಯಾ, ಒಂದು ದಿನ ನಾನು ಊರಿನ ಕೆರೆಯಬಳಿ ಸಂಧ್ಯಾವಂದನೆಯಲ್ಲಿರುವಾಗ ಸಂಜೆಯ ಮಬ್ಬು ಬೆಳಕಿನಲ್ಲಿ ಯಾರೋ ಇಬ್ಬರು ಕೆರೆಯಂಚಿನಲ್ಲಿ ನಿಂತು ಅಳುವುದು ಕೇಳಿಸಿ ನಾನು ಅಲ್ಲಿಗೆ ಧಾವಿಸಿದೆ. ದಂಪತಿಗಳು ಇಬ್ಬರು ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳುವುದರಲ್ಲಿದ್ದರು ಎಂದು ತಿಳಿಯಿತು. ನಾನು ಅವರು ಮಾಡುತ್ತಿದ್ದಿದ್ದು ಮಹಾಪಾಪದ ಕೆಲಸ, ಹುಟ್ಟಿಸಿದ ದೇವರು ಇಂಥಾ ಹೇಡಿತನವನ್ನು ಮೆಚ್ಚುವುದಿಲ್ಲ. ಮತ್ತು ದೇವರು ಹುಟ್ಟಿಸಿದ ಮೇಲೆ ನಿಮ್ಮನ್ನು ಕರೆದುಕೊಳ್ಳುವ ಅಧಿಕಾರವೂ ಅವನಿಗೇ ಇದೆ. ಅವನು ಕರೆದಾಗ ಹೋಗಬೇಕು ಅಷ್ಟೇ. ಖಂಡಿತಾ ಭಗವಂತನ ಸೃಷ್ಟಿಯ ಯಾವ ಜೀವಿಗೂ ಪ್ರಾಣ ಕಳೆದುಕೊಳ್ಳುವ ಅಧಿಕಾರವಿಲ್ಲಾ ಮತ್ತು ಅದು ಮಹಾಪಾಪ ಕೂಡಾ. ದಯವಿಟ್ಟು ಆತ್ಮಹತ್ಯೆಯ ಯೋಚನೆ ಬಿಟ್ಟು ಮನೆಗೆ ಹೋಗಿ ಪರಸ್ಪರರ ತಪ್ಪುಗಳನ್ನು ಮನ್ನಿಸಿ ಕೊಂಡು ಅನ್ಯೋನ್ಯವಾಗಿ ಪ್ರೀತಿ ಪ್ರೇಯದಿಂದ ಬಾಳಿರಿ ಖಂಡಿತವಾಗಿಯೂ ನಿಮಗೆ ಕೆಲವು ದಿನಗಳಲ್ಲಿ ಒಳ್ಳೆಯದಾಗುತ್ತದೆ ಎಂದು ಸಮಾಧಾನ ಮಾಡಿ ವಾಪಸ್ ಕಳಿಸಿದೆ.

ನನ್ನ ಮಾತಿನ ಮೇಲೆ ವಿಶ್ವಾಸವಿಟ್ಟು ಆ ದಂಪತಿಗಳು ಮನೆಗೆ ಹಿಂತಿರುಗಿದರು. ಕೆಲವು ತಿಂಗಳುಗಳ ನಂತರ ಆ ದಂಪತಿಗಳು ನನ್ನ ಬಳಿ ಬಂದರು. ಈ ಬಾರಿ ಸಂತೋಷ ಉತ್ಸಾಹಗಳಿಂದ ಇದ್ದರು. ಕಾರಣವೇನೆಂದರೆ ಅವರಿಗೆ ವಂಶೋದ್ಧಾರಕನೊಬ್ಬನು ಹುಟ್ಟುವ ಸೂಚನೆ ಇತ್ತು. ಮಕ್ಕಳಾಗುವುದಿಲ್ಲವೆಂಬ ಜಿಗುಪ್ಸೆಯಿಂದ ಅವರು ತಮ್ಮ ಆಸ್ತಿ, ಧನ ಕನಕಾದಿಗಳನ್ನೆಲ್ಲಾ ದೇವಾಲಯಕ್ಕೆ ಬರೆದಿಟ್ಟು ಆತ್ಮಹತ್ಯೆಗೆ ಶರಣಾಗುವುದರಲ್ಲಿದ್ದರು. ನಾನು ಅವರಿಗೆ ಸಮಾಧಾನ ಹೇಳಿ ಕಳಿಸಿದಮೇಲೆ ಅವರು ಪುನಃ ಸಾಂಸಾರಿಕ ಜೀವನ ನಡೆಸಲು ಉದ್ಯಮಿಸಿದ್ದರು. ದೇವರ ದಯದಿಂದ ಅವರಿಗೆ ಮಗುವಿನ ಯೋಗ ಬಂದಿತ್ತು. ಅವರು ನನಗೆ ಕೃತಜ್ಞತೆಗಳನ್ನು ಹೇಳಿ ಸ್ವಲ್ಪ ಧನವನ್ನು ನಾನು ಎಷ್ಟೋ ಬೇಡವೆಂದರು ಕೇಳದೆ ಕೊಟ್ಟು ಹೋದರು.

ಇನ್ನೂ ಕೆಲವು ತಿಂಗಳುಗಳ ನಂತರ ಆ ದಂಪತಿಗಳು ಪುನಃ ಬಂದು ತಮಗೆ ಪುತ್ರರತ್ನ ಪ್ರಾಪ್ತಿಯಾದ ಸಂತೋಷದ ವಿಷಯ ತಿಳಿಸಿ 'ಅವತ್ತು ನೀವು ನಮ್ಮನ್ನು ಉಳಿಸಿ 'ದೇವರು ಒಳ್ಳೆಯದು ಮಾಡುತ್ತಾನೆ' ಎಂದು ಆಶೀರ್ವದಿಸಿದ್ದಿರಿ ಸ್ವಾಮಿ. ನಿಮ್ಮ ಮಾತು ಇಂದು ನಿಜವಾಯಿತು' ಎಂದು ಹೇಳಿ ಇನ್ನೂ ಒಂದಿಷ್ಟು ಧನವನ್ನು ಅರ್ಪಿಸಿ ಹೋದರು. ಅವರ ಕೃತಜ್ಞತಾ ಪೂರ್ವಕ ಕಾಣಿಕೆಗಳಿಂದ ನನ್ನ ಬಡತನ ನೀಗಿಸಿಕೊಂಡೆ.



ಕೆಲವು ವರ್ಷಗಳ ನಂತರ ಪುನಃ ಆ ದಂಪತಿಗಳು ತಮ್ಮ ಮಗನೊಂದಿಗೆ ಬಂದು ಅವನಿಗೆ ಅಕ್ಷರಾಭ್ಯಾಸ ಮಾಡಲು ನಾಂದಿ ಹಾಕಬೇಕು ಎಂದು ಕೋರಿದರು.

ಅವರ ಆಶಯದಂತೆ ಅವನಿಗೆ ಅಕ್ಷರಾಭ್ಯಾಸ ಪ್ರಾರಂಭಿಸಿ 'ಮುಂದೆ ದೊಡ್ಡ ವ್ಯಕ್ತಿ ಯಾಗಿ ಸಮಾಜಕ್ಕೆ ಅನುಕೂಲವಾಗಿ ನಿಮಗೆ ಕೀರ್ತಿ ತರಲಿ' ಎಂದು ಆಶೀರ್ವದಿಸಿದೆ.

ಆಗ ಕೃತಜ್ಞತಾ ಪೂರ್ವಕವಾಗಿ ಮತ್ತೆ ಒಂದಿಷ್ಟು ಧನ ಕನಕಗಳನ್ನು ಕಾಣಿಕೆಯಾಗಿ ನೀಡಿದರು.

ಎಷ್ಟೋ ವರ್ಷಗಳ ನಂತರ ಅವರ ಮಗ ಓದಿ ಬರೆದು ವಿದ್ಯಾವಂತನಾಗಿ ತಮ್ಮಂತೆ ನ್ಯಾಯಾಧೀಶನಾದನೆಂದು ತಿಳಿದುಬಂತು. ಆ ದಂಪತಿಗಳು ಕಾಲವಾದರೆಂದೂ ತಿಳಿಯಿತು. ಆ ಮಗ ಎಲ್ಲಿದ್ದಾನೋ ಏನೋ. ಎಲ್ಲಿದ್ದರೂ ಅವನ ತಂದೆತಾಯಿಗಳ ಆತ್ಮಕ್ಕೆ ಶಾಂತಿ ತಂದು ಕೀರ್ತಿ ಗಳಿಸೇ ಇರುತ್ತಾನೆ. ಅಯ್ಯಾ ಹೀಗೆ ನನಗೆ ಸಂದ ಅವರ ಧನಸಹಾಯದಿಂದ ಇಷ್ಟರಮಟ್ಟಿಗೆ ಬದುಕಿದ್ದೇನೆ.

ಈಗ ನೀವೇ ನಿರ್ಧರಿಸಬೇಕು, ನಾನು ಸಂಪಾದಿಸಿದ್ದು ಅಕ್ರಮವೋ ಸಕ್ರಮವೋ ಎಂದು" ಅರ್ಚಕರು ತಮ್ಮ ಹೇಳಿಕೆಯನ್ನು ಮುಗಿಸಿದರು.

ಜಡ್ಜ್ ಕಣ್ಣುಮುಚ್ಚಿಕೊಂಡು ಸ್ವಲ್ಪ ಹೊತ್ತು ಧ್ಯಾನಿಸಿ ನಂತರ ತಮ್ಮ ಅಭಿಪ್ರಾಯವನ್ನು ತಿಳಿಸಿದರು.

"ಆ ದಿನ ನೀವು ಆ ದಂಪತಿಗಳ ಜೀವ ಉಳಿಸಿಲ್ಲದಿದ್ದರೆ ಅವರ ಮಗ ಉನ್ನತ ಸ್ಥಾನಕ್ಕೆ ಏರುತ್ತಿರಲಿಲ್ಲ. ತಮ್ಮ ಜೀವ ಉಳಿಸಿ ತಮ್ಮ ಅಭ್ಯುದಯಕ್ಕೆ ಕಾರಣರಾದ ನಿಮಗೆ ಅವರು ಕೃತಜ್ಞತಾ ಪೂರ್ವಕವಾಗಿ ನೀಡಿದ ಧನ ಅಕ್ರಮವೆನಿಸಿಕೊಳ್ಳುವುದಿಲ್ಲ. ಅದು ಸಕ್ರಮವೇ"


ಎಂದು ಹೇಳಿ ಆ ಕೇಸು ವಜಾ ಮಾಡಿದರು.

ನಂತರ ಅರ್ಚಕರನ್ನು ಕೇಳಿದರು" ಆ ದಂಪತಿಗಳ ಹೆಸರು ನೆನಪಿದೆಯೇ?".

ಅರ್ಚಕರು ಆ ಧನವಂತನ ಹೆಸರನ್ನು ಹೇಳಿದ ಕೂಡಲೇ

ಜಡ್ಜ್ ತಮ್ಮ ಆಸನ ಬಿಟ್ಟು ಕೆಳಗಿಳಿದು ಬಂದು ಅದು ಕೋರ್ಟ್ ರೂಂ ಎನ್ನುವುದನ್ನೂ ಲೆಕ್ಕಿಸದೆ ಅರ್ಚಕರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ "ನೀವು ಅಕ್ಷರಾಭ್ಯಾಸ ಮಾಡಿಸಿದ ಬಾಲಕ ನಾನೇ. ಆ ದಂಪತಿಗಳು ನನ್ನ ತಂದೆ ತಾಯಿಗಳು. ನಿಮ್ಮ ಆಶೀರ್ವಾದ ನನಗೂ ಇರಲಿ. "

ಎಂದು ಭಾವುಕರಾಗಿ ನುಡಿದು ಬಾಗಿಲತನಕ ಬಂದು ಅವರನ್ನು ಬೀಳ್ಕೊಟ್ಟರು.



Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,